ಕೊಠಾರಿ ಆಯೋಗ ಮತ್ತು ಶಿಕ್ಷಣಕ್ಕಾಗಿ ಧನಸಹಾಯ

ಡಿ.ಎಸ್.ಕೊಠಾರಿಯು ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಆಯೋಗವು (೧೯೬೪-೬೬) ಭಾರತದಲ್ಲಿ ಶಿಕ್ಷಣಕ್ಕಾಗಿ ಧನಸಹಾಯವನ್ನು ಒದಗಿಸುವುದನ್ನು ಕುರಿತು ಮೌಲ್ಯಯುತವಾದ ಶಿಫಾರಸುಗಳನ್ನು ಮಾಡಿದೆ, ಅದರಲ್ಲಿನ ಹಲವು ಶಿಫಾರಸುಗಳು ಶಿಕ್ಷಣದ ಯೋಜನೆಗೆ ಇಂದಿಗೂ ಸಂಗತವಾಗಿರುವಂತಹವು, ಆದರೆ ಅದು ಅಧಿಕೃತವಾಗಿ ಸಾಕಷ್ಟು ಗಮನವನ್ನು ಸೆಳೆದಿಲ್ಲ. ಪ್ರಸ್ತುತ ಲೇಖನದಲ್ಲಿ ಆಯೋಗದ ಶಿಫಾರಸಿನ ನೆಲೆಗಳ ಮತ್ತು ದೂರದರ್ಶಿತ್ವದ ಪರಾಮರ್ಶೆ ಮತ್ತು ಅವುಗಳ ಪ್ರಸ್ತುತತೆಯನ್ನು ತೋರಿಸುವ ಪ್ರಯತ್ನವನ್ನು ಮಾಡಲಾಗಿದೆ ಮತ್ತು ಹನ್ನೊಂದನೆಯ ಯೋಜನೆಯ ತಯಾರಿಯಲ್ಲಿ ಇದು ಉಪಯುಕ್ತವಾಗಬಹುದು ಎನ್ನುವ ಆಶಯವಿದೆ.

<u>ಜಾಂಧ್ಯಾಲಾ ಬಿ.ಜಿ. ತಿಲಕ್</u>

ಒಟ್ಟು ರಾಷ್ಟ್ರೀಯ ಉತ್ಪನ್ನದ ಅತ್ಯಂತ ಹೆಚ್ಚು ಪ್ರಮಾಣವನ್ನು ಶಿಕ್ಷಣದ ಅಭಿವೃದ್ಧಿಗೆ ಹಂಚಿಕೆ ಮಾಡಲು ನಾವು ಶ್ರಮವಹಿಸಬೇಕಾಗಿದೆ.

- ಶಿಕ್ಷಣ ಆಯೋಗ (೧೯೬೬, ಪು. ೮೮೯)

ಶಿಕ್ಷಣಕ್ಕೆ ಮಾಡಬೇಕಾದ ಧನಸಹಾಯದ ವಿಷಯಕ್ಕೆ ಸಂಬಂಧಿಸಿದಂತೆ ಕೊಠಾರಿ ಆಯೋಗವೆಂದೆ ಜನಪ್ರಿಯವಾಗಿದ್ದ ಶಿಕ್ಷಣ ಆಯೋಗದ (೧೯೬೬) ಕೊಡುಗೆಯು ಮಹತ್ತ್ವದ್ದಾಗಿದೆ. 'ಭಾರತದ ಶಿಕ್ಷಣದ ಬದುಕಿನಲ್ಲಿ ಒಂದು ಮಹತ್ತ್ವದ ತಿರುವು' ಎಂದೇ ಪರಿಗಣಿಸಲ್ಪಟ್ಟಿರುವ ಆಯೋಗದ ಈ ಸ್ಮರಣೀಯ ಕೃತಿಯಿಂದ ಭಾರತದ ಶಿಕ್ಷಣಕ್ಕೆ ಧನ ಸಹಾಯವನ್ನು ಕುರಿತು ಆಯೋಗವು ಮಾಡಿರುವ ಸಂಗತವಾದ ಶಿಫಾರಸುಗಳನ್ನು ಹೊರತೆಗೆಯುವ ಕೆಲಸವನ್ನು ಮಾಡಬಹುದು. ಅವುಗಳೆಂದರೆ (ಅ) ಕೆಲವು ಸ್ಪಷ್ಟವಾದ ಶಿಫಾರಸುಗಳು, (ಆ) ಮೌಲ್ಯಯುತವಾದ ಶಿಫಾರಸುಗಳು ಎಂದೇ ಪರಿಗಣಿಸಬಹುದಾದ ಕೆಲವು ನಿಯಮಗಳು, ಮತ್ತು (ಇ) ನೀತಿ ನಿರೂಪಕರು ಮತ್ತು ಯೋಜನಕಾರರ ದೃಷ್ಟಿಕೋನಗಳಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸುವ ಕೆಲವು ನಿಯಮಾಧಾರಿತ ಅನಿಸಿಕೆಗಳು. ಹಲವುಶಿಫಾರಸುಗಳುಮತ್ತುಅವುಗಳಿಗೆಆಧಾರವಾಗಿರುವ ನೆಲೆಗಳು ೪೦ ವರ್ಷಗಳ ಅನಂತರ ಇಂದಿಗೂ ಕೂಡ ಸಂಗತವಾದವುಗಳಾಗಿವೆ. ಇವೆಲ್ಲವನ್ನೂ ಒಳಗೊಳ್ಳುವ ಯಾವುದೇ ಭರವಸೆಯನ್ನು ಕೊಡದೆ ಈ ಸಂಕ್ಷಿಪ್ತ ಲೇಖನವು ಮೂಲತತ್ತ್ವಗಳನ್ನು, ಅಳವಡಿಕೆಯನ್ನು ಮತ್ತು ಸದ್ಯದಲ್ಲಿ ಅವುಗಳ ಸಂಗತತೆಯನ್ನು ಮರುಪರಿಶೀಲನೆ ಮಾಡುತ್ತದೆ. ಧನಸಹಾಯಕ್ಕೆ ಬಹಳ ನಿಕಟ ಸಂಬಂಧವನ್ನು ಹೊಂದಿರುವ ಅಂಶಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖ ಮಾಡಿದರೂ ಕೂಡ ಇದರ ಕೇಂದ್ರ ದೃಷ್ಟಿ ಇರುವುದು ಶಿಕ್ಷಣಕ್ಕೆ ನೀಡಬೇಕಾದ ಧನಸಹಾಯದ ಬಗ್ಗೆ.

ಆಯೋಗದ ಸದಸ್ಯ ಕಾರ್ಯದರ್ಶಿಯಾಗಿದ್ದ ಮತ್ತು ಈ ಬೃಹತ್ ಸಂಪುಟಗಳ ಕರಡು ಪ್ರತಿಯನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದ ಜೆ.ಪಿ. ನಾಯಕ್ (೧೯೭೯) ಶಿಫಾರಸುಗಳನ್ನು ಮೂರು ಬಗೆಯಲ್ಲಿ ವರ್ಗೀಕರಿಸಿದ್ದಾರೆ: (೧) ವ್ಯಾಪಕವಾಗಿ ಗಮನವನ್ನು ಸೆಳೆದಶಿಫಾರಸುಗಳು, (೨) ಒಪ್ಪಿಗೆಯಾಗದ ಮತ್ತು ತಿರಸ್ಕರಿಸಲ್ಪಟ್ಟ ಶಿಫಾರಸುಗಳು, (೩)

"ಇತರ" ಶಿಫಾರಸುಗಳು. ಇತರ ಶಿಫಾರಸ್ಸುಗಳೆಂದರೆ: (ಅ) ಯಾವುದೇ ಪ್ರಮುಖ ವಿವಾದಕ್ಕೊಳಗಾಗದ ಅನುಮತಿ ಪಡೆದ ಆದರೆ ಅಳವಡಿಕೆಯಲ್ಲಿ ಗಂಭೀರವಾಗಿ ಪರಿಗಣಿಸಲ್ಪಡದವುಗಳು; (ಆ) ನಿರ್ಲಕ್ಷಿಸಲ್ಪಟ್ಟಂತಹವುಗಳು; ಮತ್ತು (ಇ) ಇತರ ಶಿಫಾರಸುಗಳು. ಮತ್ತೊಂದು ವರ್ಗದ ಶಿಫಾರಸುಗಳೂ ಇವೆ: (ಳ) ಒಪ್ಪಿಗೆ ಮತ್ತು ಅನುಮತಿಯನ್ನು ಪಡೆದ ಆದರೆ ಅನುಷ್ಠಾನಗೊಳ್ಳದ ಶಿಫಾರಸುಗಳು. ಶಿಕ್ಷಣಕ್ಕೆ ಧನಸಾಹಯಕ್ಕಾಗಿ ಆಯೋಗವು ಮಾಡಿದ ಪ್ರಮುಖ ಶಿಫಾರಸುಗಳು ಈ ಕೊನೆಯ ವರ್ಗಕ್ಕೆ ಸೇರುತ್ತವೆ; ವ್ಯಾಪಕವಾಗಿ ಗಮನವನ್ನು ಸೆಳೆದ ಆದರೆ ಅನುಷ್ಠಾನಗೊಳಿಸಲು ಯಾವುದೇ ಕ್ರಮಗಳನ್ನು ಕೈಗೊಳ್ಳದ ಕೆಲವು ಮೊದಲನೆಯ ವರ್ಗಕ್ಕೆ ಸೇರುತ್ತವೆ; ಬಹಳಷ್ಟು ಒಪ್ಪಿಗೆಯಾಗದ ಮತ್ತು ತಿರಸ್ಕೃತಗೊಂಡಂತಹವುಗಳು ಎರಡನೆಯ ವರ್ಗಕ್ಕೆ ಸೇರುತ್ತವೆ; ಮತ್ತೆ ಕೆಲವು ನಿರ್ಲಕ್ಷ್ಯಕ್ಕೊಳಪಟ್ಟ ಅಥವಾ ಯಾವುದೇ ಮಹತ್ತ್ವವಿರದ ವರ್ಗಕ್ಕೆ ಸೇರುತ್ತವೆ.

ಮೊದಲಿಗೆ ಭಾರತದಲ್ಲಿ ಬಹುಶಃ ಮೊಟ್ಟ ಮೊದಲಬಾರಿಗೆ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗೆ ಶಿಕ್ಷಣದ ಮಹತ್ತ್ವವನ್ನು ಆಯೋಗವು ಬಲವಾಗಿ ಪ್ರತಿಪಾದಿಸಿತು ಎನ್ನುವುದನ್ನು ಗಮನಿಸುವುದು ಬಹು ಮುಖ್ಯವಾಗುತ್ತದೆ. "ವಿಜ್ಞಾನವು ತಳಹದಿಯಾಗಿರುವ ಜಗತ್ತಿನಲ್ಲಿ ದೇಶದ ಕಲ್ಯಾಣ, ಪ್ರಗತಿ, ಮತ್ತು ಭದ್ರತೆ ಮತ್ತು ಸಮಗ್ರ ಅಭಿವೃದ್ಧಿಯ ಪ್ರಕ್ರಿಯೆಗಳಲ್ಲಿ ಶಿಕ್ಷಣ ಹಾಗೂ ಸಂಶೋಧನೆಗಳು ನಿರ್ಣಾಯಕವಾಗಿರುತ್ತವೆ" ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಶಿಕ್ಷಣವು "ಜನರ ಏಳಿಗೆ, ಕಲ್ಯಾಣ ಮತ್ತು ಭದ್ರತೆಯನ್ನು ನಿರ್ಣಯಿಸುತ್ತದೆ" ಎನ್ನುವುದನ್ನು ಒತ್ತಿ ಹೇಳಲಾಗಿದೆ. ಆಯೋಗವು ಶುಲ್ಟ್ಜ್(Schultz) ಸೃಷ್ಟಿಸಿದ "ಆರ್ಥಿಕ ಚಿಂತನೆಯಲ್ಲಿ ಮಾನವ ತೊಡಗಿಸುವಿಕೆಯ ಕ್ರಾಂತಿ"ಯಿಂದ ಪ್ರಭಾವಿತವಾದಂತಿದೆ. ಇದರ ಪ್ರಕಾರ ಶಿಕ್ಷಣದಲ್ಲಿ ತೊಡಗಿಸುವಿಕೆಯು ಮಾನವ ಬಂಡವಾಳವನ್ನು ಸೃಷ್ಟಿಸುತ್ತದೆ ಅದರ ಪರಿಣಾಮವಾಗಿ ಆರ್ಥಿಕ ಬೆಳವಣಿಗೆಯಾಗುತ್ತದೆ. ಒಟ್ಟಾರೆಯಾಗಿ ಶಿಕ್ಷಣದ ಬೆಳವಣಿಗೆಯ ದೃಷ್ಟಿಕೋನ ಮತ್ತು ವಿಶೇಷವಾಗಿ ಶಿಕ್ಷಣಕ್ಕೆ ಧನಸಹಾಯದ ಬಗ್ಗೆ ಅದು ತೆಗೆದುಕೊಂಡ ನಿಲುವಿನಲ್ಲಿ ಅಭಿವೃದ್ಧಿಯಲ್ಲಿ ಶಿಕ್ಷಣವು ವಹಿಸುವ ಪಾತ್ರದ ಬಗ್ಗೆ ಇದ್ದ ಬದ್ಧತೆಯಿಂದ ಆಯೋಗವು ಪ್ರಭಾವಿಸಲ್ಪಟ್ಟಿತ್ತು ಎನ್ನುವುದು ತಿಳಿಯುತ್ತದೆ. ಕೇವಲ ಪ್ರಾದೇಶಿಕ ತಾರತಮ್ಯಗಳನ್ನಷ್ಟೇ ಅಲ್ಲದೆ ಆಯೋಗವು ಭಾರತದಲ್ಲಿರುವ ವಿವಿಧ ಸಮಾಜೊ-ಆರ್ಥಿಕ ವರ್ಗಗಳ ನಡುವೆ ಸಮಾನತೆಯನ್ನು ಖಾತ್ರಿಗೊಳಿಸಬೇಕಾದ ಅಗತ್ಯವನ್ನು ಮನಗಂಡಿತು. ಹಾಗಾಗಿ ಅದು " ನಾವು ಶಿಕ್ಷಣಕ್ಕೆ ಅತ್ಯಂತ ಹೆಚ್ಚು ಮಹತ್ತ್ವವನ್ನು ನೀಡಬೇಕು ಮತ್ತು ಒಟ್ಟು ರಾಷ್ಟ್ರೀಯ ಉತ್ಪಾದನೆಯ ಅತ್ಯಂತ ಹೆಚ್ಚು ಪ್ರಮಾಣವನ್ನು ಅದಕ್ಕೆ ಹಂಚಿಕೆ ಮಾಡಬೇಕು" ಎಂದು ವಾದಿಸಿತು. "ವಿಜ್ಞಾನಯುಗದಲ್ಲಿ ಶಿಕ್ಷಣದ ಹೊರತು ಮತ್ತೊಂದಕ್ಕೆ ಪ್ರಾಧಾನ್ಯ ನೀಡುವುದು ಮತ್ತು ಅದರ ಬಗ್ಗೆ ತೋರುವ ಜಿಪುಣತನದಷ್ಟು ಅಪಾಯಕಾರಿಯಾದುದು ಯಾವುದೂ ಇಲ್ಲ" ಎಂದು ಎಚ್ಚರಿಸಿತು. ಎರಡನೆಯದಾಗಿ ಅದು ಭಾರತ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳ ನಡುವೆ ಇರುವ ಅಂತರದ ಬಗ್ಗೆ ಮತ್ತು ಶಿಕ್ಷಣದ ಮೂಲಕ ಒಂದೆಡೆಯಿಂದ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ದೇಶಗಳ ನಡುವಿನ ಅಂತರ ಮತ್ತು ಮತ್ತೊಂದೆಡೆಯಿಂದ ಭಾರತದೊಳಗಿನ ವಿವಿಧ ರಾಜ್ಯಗಳು ಮತ್ತು ಪ್ರದೇಶಗಳೊಳಗಿನ ಅಂತರವನ್ನು ಕಡಮೆ ಮಾಡುವುದರ ಬಗ್ಗೆ ತುಂಬ ಕಾಳಜಿಯನ್ನು ಹೊಂದಿತ್ತು. "ಭಾರತ ಮತ್ತು ಇತರ ಶ್ರೀಮಂತ ದೇಶಗಳ ನಡುವಿನ ಅಂತರವನ್ನು ಕಡಮೆ ಮಾಡಬೇಕು" ಎನ್ನುವ ನಿರ್ಧಾರವನ್ನು ಅದು ತೆಗೆದುಕೊಂಡಿತು. ಮೂರನೆಯದಾಗಿ ಶಿಕ್ಷಣದ

ಸಮಗ್ರ ಆಯಾಮಗಳನ್ನು ಪರಿಶೀಲಿಸಬೇಕಾದ ಜವಬ್ದಾರಿಯನ್ನು ವಹಿಸಲಾದ ಮೊತ್ತ ಮೊದಲ ಆಯೋಗ ಇದಾಗಿತ್ತು ಮತ್ತು ಅದನ್ನು ಅದು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸಿ ಶಿಕ್ಷಣವನ್ನು ವಿವಿಧ ಹಂತದ ಬಿಡಿಭಾಗಗಳಾಗಿ ನೋಡದೆ ಒಂದು ಪರಿಪೂರ್ಣ ಮತ್ತು ಸಮಗ್ರವಾದ ದೃಷ್ಟಿಕೋನದಿಂದ ಅದರ ಎಲ್ಲ ಆಯಾಮಗಳನ್ನು ಪರಿಶೀಲಿಸಿತು.

ಜನಪ್ರಿಯರಾಗಿದ್ದ ಪ್ರಧಾನಮಂತ್ರಿಯವರ ನಿಧನ, ನೆರೆರಾಷ್ಟ್ರದೊಂದಿಗೆ ನಡೆದ ಭಾರೀ ಯುದ್ಧ, ಬರಗಾಲದ ಕೃಷಿ ಮತ್ತು ಅದರ ಪರಿಣಾಮವಾದ ಹಣದುಬ್ಬರ ಮತ್ತು ನಿರುದ್ಯೋಗವನ್ನೊಳಗೊಂಡ ತೀವ್ರ ಆರ್ಥಿಕ ಸಮಸ್ಯೆಗಳು ಎಲ್ಲವೂ ನಡೆದಿದ್ದು ಅಭಿವೃದ್ಧಿಶೀಲ ದೇಶದಲ್ಲಿ. ಇಂತಹ ಅಸ್ಥಿರವಾದ ರಾಜಕೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಆಯೋಗವು ಕೆಲಸ ಮಾಡಬೇಕಾಯಿತು ಎನ್ನುವುದು ವಿಶೇಷವಾಗಿ ಅದರ ಮಹತ್ತ್ವವನ್ನು ತಿಳಿಸುತ್ತದೆ. ಇವೆಲ್ಲವುಗಳ ನಡುವೆ ಶಿಕ್ಷಣಕ್ಕೆ ಗರಿಷ್ಠ ಮೊತ್ತವನ್ನು ತೊಡಗಿಸಬೇಕು ಮತ್ತು ಅದೇ ಸಮಯದಲ್ಲಿ ವಿಪರೀತವಲ್ಲದ ಕಾರ್ಯ ಸಾಧುವಾದ ಅಳತೆಗೋಲಿನ ಚೌಕಟ್ಟಿನಲ್ಲಿ ಸಂಪನ್ಮೂಲಗಳ ಬಳಕೆಯಲ್ಲಿ ಮಿತವನ್ನು ಸಾಧಿಸಬೇಕು ಮತ್ತು ಶಿಕ್ಷಣದ ವಿಸ್ತರಣೆಯನ್ನು ನಿಯಂತ್ರಿಸಬೇಕು ಎಂದು ಹೇಳಿದ ಆಯೋಗವು ಧೈರ್ಯ ಹಾಗೂ ಎಚ್ಚರಗಳೆರಡನ್ನೂ ತೋರಿಸಿತು. ಆಡಳಿತಾರೂಢ ಕಾಂಗ್ರೆಸ್ ಹಲವು ರಾಜ್ಯಗಳಲ್ಲಿ ಅಧಿಕಾರವನ್ನು ಕಳೆದುಕೊಂಡಿದ್ದು, ಹಣದುಬ್ಬರದ ಪರಿಸ್ಥಿತಿ,ಹಣದ ಮೌಲ್ಯದ ಕುಸಿತ,ಮತ್ತು ಯೋಜನಾ ರಜೆ ಇವೆಲ್ಲವುಗಳನ್ನೂ ಒಳಗೊಂಡಿದ್ದ ಅಸ್ಥಿರ ರಾಜಕೀಯ ಪರಿಸ್ಥಿತಿಯಲ್ಲಿ ಆಯೋಗದ ಹಲವು ಶಿಫಾರಸ್ಸುಗಳ ಅನುಷ್ಠಾನಗೊಳಿಸಬೇಕಿತ್ತು.

ಭಾರತದಲ್ಲಿ ಶಿಕ್ಷಣಕ್ಕೆ ನೀಡಬೇಕಾದ ಧನಸಹಾಯದ ವಿವರವಾದ ವಿಶ್ಲೇಷಣೆಯು ಆಯೋಗದ ಪ್ರಮುಖ ಕೊಡುಗೆಯಾಗಿದೆ. ವರದಿಯಲ್ಲಿ ತೋರಿಸಲು ಪ್ರಯತ್ನಿಸಿರುವ ಧನಸಹಾಯದ ವಿಶ್ಲೇಷಣೆಯು, ವಿಶೇಷವಾಗಿ ೧೯ನೇ ಅಧ್ಯಾಯವು, ಭಾರತದಲ್ಲಿ ಮಾಡಲಾದ ಇದೇ ಮೊದಲ ಪ್ರಯತ್ನವಾಗಿದೆ. ಶಿಕ್ಷಣದ ಧನ ಸಹಾಯವನ್ನು ಕುರಿತ ವಿಶ್ಲೇಷಣೆಯು ಈ ವರದಿಯ ಕಾಲದಲ್ಲಿ ಬೇರೆ ದೇಶಗಳಲ್ಲೂ ಸಹ ವಿರಳವೆಂದೇ ಹೇಳಬೇಕು. ವರದಿಯುಲ್ಲಿರುವುದು ಅ) ವಿವರವಾದ ವೆಚ್ಚದ ವಿವರಣೆ –ಹಂತಗಳು ಮತ್ತು ಉದ್ದೇಶಗಳು, ಆ) ವಿವರವಾದ ಮೂಲಗಳನ್ನು ಆಧರಿಸಿದ ನಿಧಿಗಳ ವಿಶ್ಲೇಷಣೆ, ಇ) ಘಟಕದ ವೆಚ್ಚದ ವಿಶ್ಲೇಷಣೆ, ಮತ್ತು ಈ) ಏರಿಳಿತವಿಲ್ಲದ ಬೆಲೆಯಲ್ಲಿ ಮುಂದಿನ ಇಪ್ಪತ್ತು ವರ್ಷಗಳವರೆಗೆ ಶಿಕ್ಷಣಕ್ಕೆ ಅಗತ್ಯವಿರುವ ಸಂಪನ್ಮೂಲಗಳ ವಿವರವಾದ ಅಂದಾಜು. ಒದಗಿಸಲಾದ ವಿವರವಾದ ಚೌಕಟ್ಟು ಮತ್ತು ಒಳನೋಟಗಳನ್ನುಳ್ಳ ವಿಶ್ಲೇಷಣೆಯು ಆರ್ಥಶಾಸ್ತ್ರದ, ಶಿಕ್ಷಣಕ್ಕೆ ಧನಸಹಾಯವನ್ನು ಕುರಿತಾದ ಮತ್ತು ಶಿಕ್ಷಣದ ಯೋಜನೆಯನ್ನು ರೂಪಿಸುವ ಸಂಶೋಧಕರಿಗೆ ಅತ್ಯಂತ ಮಹತ್ತ್ವದ್ದಾಗಿದೆ. ಇಂತಹ ಅಧ್ಯಯನಗಳು ಲಭ್ಯವಿಲ್ಲದಿರುವ ಬಗ್ಗೆ ಮತ್ತು ಅಂತಹ ಅಧ್ಯಯನಗಳು ಎಷ್ಟು ಮಹತ್ತ್ವದ್ದು ಎನ್ನುವುದನ್ನು ಕುರಿತು ಆಯೋಗವು ಉಲ್ಲೇಖಿಸುತ್ತದೆ ಮತ್ತು ಇಂತಹ ಅಧ್ಯಯನಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯಗಳನ್ನು ಬೆಂಬಲಿಸಬೇಕೆಂದು ಶಿಫಾರಸ್ಸು ಮಾಡುತ್ತದೆ.

ಶಿಕ್ಷಣಕ್ಕೆ ಹಂಚಿಕೆ: ಒಟ್ಟು ರಾಷ್ಟ್ರೀಯ ಉತ್ಪಾದನೆಯ ಶೇಕಡ ಆರು

ಶಿಕ್ಷಣಕ್ಕೆ ಧನಸಹಾಯವನ್ನು ಕುರಿತಂತೆ ಆಯೋಗವು ಮಾಡಿದ ಎಲ್ಲ ಶಿಫಾರಸುಗಳಲ್ಲಿ ಮುಖ್ಯವಾದುದೆಂದರೆ ರಾಷ್ಟ್ರೀಯ ಆದಾಯದ ಶೇಕಡ ಆರರಷ್ಟು ಶಿಕ್ಷಣಕ್ಕೆ ಹಂಚಿಕೆಯಾಗಬೇಕು ಎನ್ನುವುದು. ಆ ಸ್ವಾತಂತ್ರ್ಯಾನಂತರದಲ್ಲಿ ಶಿಕ್ಷಣದ ಧನಸಹಾಯದ ಬಗ್ಗೆ ತೋರಿರುವ ಒಲವುಗಳ ಸವಿವರ ವಿಶ್ಲೇಷಣೆಯನ್ನು ಆಯೋಗವು ಮಾಡಿದೆ. ೧೯೮೫-೮೬ ರವರೆಗೆ ಶೈಕ್ಷಣಿಕ ವ್ಯವಸ್ಥೆಗೆ ಅಗತ್ಯವಾಗಿ ಮಾಡಬೇಕಿರುವ ವೆಚ್ಚದ ಅಂದಾಜನ್ನು ತಯಾರಿಸಿದ ಆಯೋಗವು "ಶಿಕ್ಷಣವು ಸೂಕ್ತವಾದ ಬೆಳವಣಿಗೆಯನ್ನು ಕಾಣಬೇಕೆಂದರೆ ...ರಾಷ್ಟ್ರೀಯ ಆದಾಯದಲ್ಲಿ ಶಿಕ್ಷಣಕ್ಕೆ ಹಂಚಿಕೆ ಮಾಡಬೇಕಾದ ಪ್ರಮಾಣವು... ೧೯೮೫-೮೬ರ ಸಮಯಕ್ಕೆ ಶೇಕಡ ಆರಕ್ಕೆ ಏರಿಕೆಯಾಗಬೇಕು" ಎಂದು ಹೇಳುತ್ತದೆ. ಆಯೋಗವು ಮಾಡಿದ ಹಲವು ಶಿಫಾರಸುಗಳಲ್ಲಿ ರಾಷ್ಟ್ರೀಯ ಆದಾಯದ ಶೇಕಡ ಆರರ ಶಿಫಾರಸನ್ನು ಭಾರತ ಸರಕಾರವು ಅನುಮೋದಿಸಿತು ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ೧೯೬೮ರಲ್ಲಿ "ಶಿಕ್ಷಣದಲ್ಲಿ ತೊಡಗಿಸುವಿಕೆಯನ್ನು ಅದು ಆದಷ್ಟು ಬೇಗ ರಾಷ್ಟ್ರೀಯ ಆದಾಯದ ಶೇಕಡ ಆರರಷ್ಟಾಗುವಂತೆ ಹೆಚ್ಚಿಸುತ್ತಾ ಹೋಗುವುದು" ಎಂದು ನಿರ್ಣಯಿಸಲಾಗುತ್ತದೆ. ಗುರಿಯನ್ನು ತಲಪಲು ಸಾಧ್ಯವಾಗದಿದ್ದಾಗ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ೧೯೬೮ ರ ನಿರ್ಣಯವನ್ನು ಪುನರುಚ್ಚರಿಸುತ್ತಾ" ಎಂಟನೆಯ ಪಂಚವಾರ್ಷಿಕ ಯೋಜನೆಯ ಅನಂತರ ಇದನ್ನು (ಶಿಕ್ಷಣಕ್ಕೆ ಮಾಡಬೇಕಾದ ವೆಚ್ಚವನ್ನು) ರಾಷ್ಟ್ರೀಯ ಆದಾಯದ ಶೇಕಡ ಆರನ್ನೂ ಮೀರುವಂತೆ ಖಾತ್ರಿಪಡಿಸಲಾಗುವುದು" ಎಂದು ಹೇಳಿತು. ಮತ್ತೆ ಇದರ ಅನುಷ್ಠಾನವು ಅಸಮರ್ಪಕವಾದುದರಿಂದ ೧೯೯೨ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅದನ್ನೆ ಪುನರುಚ್ಚರಿಸಲಾಯಿತು. ರಾಷ್ಟ್ರೀಯ ಶಿಕ್ಷಣ ನೀತಿಯ ಪುನರ್‌ಪರಿಶೀಲನಾ ಸಮಿತಿಯು (ಆಚಾರ್ಯ ರಾಮಮೂರ್ತಿ ಸಮಿತಿ ೧೯೯೦ ಎಂದೇ ಪರಿಚಿತವಾಗಿರುವ) ರಾಷ್ಟ್ರೀಯ ಆದಾಯದ ಶೇಕಡ ಆರರಷ್ಟನ್ನು ಶಿಕ್ಷಣಕ್ಕೆ ವಿನಿಯೋಗಿಸಬೇಕು ಎಂದು ಸ್ಪಷ್ಟಪಡಿಸಿತು. ಬಹಳ ದೀರ್ಘಕಾಲದವರೆಗೂ ಈ ಗುರಿಯನ್ನು ತಲಪಲು ಆಗದ ಕಾರಣ ಸರಕಾರವು ಇದನ್ನೇ ಪ್ರತಿ ಪಂಚವಾರ್ಷಿಕ ಯೋಜನೆಯಲ್ಲಿ, ಪ್ರತಿಯೊಂದು ಸಾರ್ವಜನಿಕ ನೀತಿ ನಿರೂಪಣೆಯಲ್ಲಿ, ಆರ್ಥಿಕ ಸಮೀಕ್ಷೆಗಳಲ್ಲಿ, ಶಿಕ್ಷಣ/ಮಾನವ ಸಂಪನ್ಮೂಲ ಸಚಿವಾಲಯದ ವರದಿಗಳಲ್ಲಿ, ಶಿಕ್ಷಣದ ಹಲವು ಸಮಿತಿ ಮತ್ತು ಆಯೋಗಗಳ ವರದಿಗಳಲ್ಲಿ, ಅಲ್ಲದೆ ಕೆಂಪು ಕೋಟೆಯ ಮೇಲಿನಿಂದ ಪ್ರಧಾನಮಂತ್ರಿಗಳು ಮಾಡುವ ಸ್ವಾತಂತ್ರ್ಯೋತ್ಸವದ ಭಾಷಣಗಳಲ್ಲಿ ಪುನರುಚ್ಚರಿಸುತ್ತಲೇ ಬಂದಿದೆ. ಎಲ್ಲ ರಾಜಕೀಯ ಪಕ್ಷಗಳ ಪ್ರಣಾಳಿಕೆಗಳಲ್ಲಿ ಮತ್ತು ಇತರ ಕಾರ್ಯ ಸೂಚಿಗಳಲ್ಲಿ ಇದಕ್ಕೆ ಸಮ್ಮತಿಯನ್ನು ಸೂಚಿಸಲಾಗುತ್ತದೆ. ಇವೆಲ್ಲವೂ ಆಯೋಗದ ಶಿಫಾರಸನ್ನು ಪೂರೈಸಲು ಭಾರತಾದ್ಯಂತ ಒಮ್ಮತದ ಬೆಂಬಲವಿದೆ ಎನ್ನುವುದನ್ನು ತೋರಿಸುತ್ತದೆ.

ಆದಾಗ್ಯೂ, ಬಹಳಷ್ಟು ಉಲ್ಲೇಖವಾಗಿರುವ ಈ ಶಿಫಾರಸ್ಸು ಸಾಕಷ್ಟು ವಿವಾದದಿಂದಲೂಕೂಡಿದೆ. ರಾಷ್ಟ್ರೀಯ ಆದಾಯ, ಶೈಕ್ಷಣಿಕ ವೆಚ್ಚ, ಮತ್ತು ಶೇಕಡ ಆರು, ಮುಂತಾದ ಪರಿಭಾಷೆಗಳಿಗೆ ಅರ್ಥಹೀನ ವ್ಯಾಖ್ಯಾನ ಮತ್ತು ವ್ಯಾಪ್ತಿಯನ್ನು ಕೊಡಲಾಗಿದೆ. ಆಯೋಗದ ಶಿಫಾರಸು, ರಾಷ್ಟ್ರೀಯ ಶಿಕ್ಷಣ ನೀತಿ ೧೯೬೮, ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ರ

ನಿರ್ಣಯಗಳ ಮೂಲಸತ್ತ್ವವನ್ನು ತಿರುಚಲಾಗಿದೆ. ಅಂತಿಮವಾಗಿ ಭಾರತವು ಈಗಾಗಲೆ ರಾಷ್ಟ್ರೀಯ ಆದಾಯದ ಶೇಕಡ ಆರಕ್ಕಿಂತ ಹೆಚ್ಚಿನ ಹಣವನ್ನು ಶಿಕ್ಷಣಕ್ಕೆ ವ್ಯಯಿಸುತ್ತಿದೆ ಹಾಗಾಗಿ ಗುರಿಯನ್ನು ಮುಟ್ಟುವ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂದು ವಾದಿಸಲಾಗಿದೆ. ಈ ತರಹದ ಪ್ರಮುಖ ಪ್ರಯತ್ನಗಳೆಂದರೆ ರಾಷ್ಟ್ರೀಯ ಯೋಜನಾ ಆಯೋಗವು ಕಳುಹಿಸಿದ ಲೇಖನ (ಕೊಲ್ಹಾಟ್‌ಕರ್ ೧೯೮೮), ಬಿ.ಜೆ.ಪಿ. ಮತ್ತು ಅದರ ಒಕ್ಕೂಟದ ಸಹಭಾಗಿಗಳ ರಾಷ್ಟ್ರೀಯ ಕಾರ್ಯಸೂಚಿ (೧೯೮೮). ಒಂಬತ್ತನೆ ಪಂಚವಾರ್ಷಿಕ ಯೋಜನೆಯ ಕರಡುಪ್ರತಿ (೧೯೯೯, ಪು.೧೦೧) ಮತ್ತು ವಿತ್ತ ಸಚಿವಾಲಯದ ಆರ್ಥಿಕ ಸಮೀಕ್ಷೆ (೧೯೯೯). ಆಯೋಗವು ಶಿಫಾರಸು ಮಾಡಿರುವ ಶೇಕಡ ಆರು ಕೇವಲ ಸರ್ಕಾರದ ವೆಚ್ಚವನ್ನು ಮಾತ್ರ ಒಳಗೊಂಡಿಲ್ಲ ಅದು ಶಿಕ್ಷಣಕ್ಕಾಗಿ ಕುಟುಂಬಗಳು ಮಾಡುವ ವೆಚ್ಚ ಮತ್ತು ಖಾಸಗಿ ವಲಯವು ಮಾಡುತ್ತಿರುವ ವೆಚ್ಚಗಳಂತಹ ಖಾಸಗಿ ವೆಚ್ಚವನ್ನೂ ಒಳಗೊಂಡಿದೆ ಎಂದು ವಾದಿಸುವ ಪ್ರಯತ್ನವನ್ನು ಮಾಡಲಾಯಿತು. ಗುರಿಯನ್ನು ಮೀರಿ ವೆಚ್ಚವನ್ನು ಮಾಡಲಾಗಿದೆ ಹಾಗಾಗಿ ಈ ಬೇಡಿಕೆ ಅರ್ಥಹೀನ ಮತ್ತು ಅದರ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿಲ್ಲ ಎಂದೂ ತೋರಿಸಲು ಪ್ರಯತ್ನಿಸಲಾಯಿತು.

ತಿಲಕ್ ಅವರು (೧೯೯೦, ೧೯೯೯, ೨೦೦೬) ತೋರಿಸಿರುವಂತೆ ಪ್ರಮಾಣಾತ್ಮಕವಾಗಿ ಗುರಿಗಳನ್ನು ಸರಿಯಾಗಿ ವ್ಯಾಖ್ಯಾನಿಸದಿರುವುದು, ನಮ್ಮ ಅತಿಯಾದ ವಿಫಲತೆಯನ್ನು ಮುಚ್ಚಿಹಾಕುವುದು ಮತ್ತು ನಮ್ಮ (ಸುಳ್ಳು) ಸಾಧನೆಗಳ ಬಗ್ಗೆ ಜಂಭ ಕೊಚ್ಚಿಕೊಳ್ಳುವುದು, ಇವೆಲ್ಲವೂ ವಾಸ್ತವಾಂಶಗಳನ್ನು ತಪ್ಪಾಗಿ ಅರ್ಥೈಸುವ ಪ್ರಯತ್ನಗಳಾಗಿವೆ. ಅಷ್ಟೇ ಅಲ್ಲ ಆಯೋಗವು ಮುಖ್ಯವಾಗಿ ಸಾರ್ವಜನಿಕ ವೆಚ್ಚವನ್ನು ಮಾತ್ರ ಉಲ್ಲೇಖಿಸಿದೆ ಎನ್ನುವುದನ್ನು ಉದ್ದೇಶಪೂರ್ವಕವಾಗಿ ಈ ಪ್ರಯತ್ನಗಳು ಮರೆಮಾಚಿವೆ ಎನ್ನುವುದನ್ನು ತಿಲಕ್ ತೋರಿಸಿದ್ದಾರೆ. ಹೋಲಿಕೆಗೆ ಅಳತೆಗೋಲಾಗಿ ಆಯೋಗವು ಉಪಯೋಗಿಸಿರುವ ಯುನೆಸ್ಕೊ ಮತ್ತು ಇತರ ಅಂತಾರಾಷ್ಟ್ರೀಯ ಅಂಕಿ-ಅಂಶಗಳೂ ಕೂಡ ಸರ್ಕಾರಿ ವೆಚ್ಚಕ್ಕೆ ಮಾತ್ರ ಸಂಬಂಧಿಸಿವೆ. ಭಾರತದ ಶಿಕ್ಷಣದ ಬಗ್ಗೆ 'ಚಾಲೆಂಜ್ ಆಫ್ ಎಡ್ಯುಕೇಶನ್' (ಗವರ್ನಮೆಂಟ್ ಆಫ್ ಇಂಡಿಯಾ ೧೯೮೫) ಎನ್ನುವ ತಲೆಬರಹದಲ್ಲಿ ವಿಮರ್ಶಾತ್ಮಕ ಪರಾಮರ್ಶೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ನ ನಿರೂಪಣೆಯಲ್ಲಿ ಆನಂದ್ ಸಾರೂಪ್‌ರವರು ಇದನ್ನು ಸ್ಪಷ್ಟಪಡಿಸಿದ್ದಾರೆ. ಯೋಜನಾ ಆಯೋಗದಲ್ಲಿ ವಿತರಿಸಲಾದ ಮತ್ತು ಅನಂತರ ಪ್ರಕಟವಾದ ಲೇಖನದಲ್ಲಿ ಸಾರೂಪ್‌ರವರು (೧೯೮೮) "ಶೀಕ್ಷಣದ ಸಾರ್ವಜನಿಕ ನೀತಿಯು ನಮ್ಮ ದೇಶದಲ್ಲಿ ಲಭ್ಯವಿರುವ ಶೈಕ್ಷಣಿಕ ಸ್ಥಳಗಳು ಮತ್ತು ಅವಕಾಶಗಳ ಬಹು ಮುಖ್ಯ ನಿರ್ಣಾಯಕ ಅಂಶಗಳಾಗಿರುವುದರಿಂದ ನೀತಿಯನ್ನು ಯೋಜಿಸುವಲ್ಲಿ ಮತ್ತು ಅದನ್ನು ಅನುಷ್ಠಾನಗೊಳಿಸುವಲ್ಲಿ ***ಇದನ್ನು (ಶೇಕಡ ೬) ಅಂದರೆ ಶಿಕ್ಷಣಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಾಡಿರುವ ವೆಚ್ಚವನ್ನು*** ಪರಿಗಣಿಸಲಾಗಿದೆ. ಇದು ಯೋಜನಾ ಮತ್ತು ಯೋಜನೇತರ ವೆಚ್ಚವನ್ನು ಒಳಗೊಂಡಿದೆ" ಎಂದು ಹೇಳುತ್ತಾರೆ (ಒತ್ತು ನನ್ನದು). ಹಾಗಾಗಿ ಆಯೋಗದ ಶಿಫಾರಸುಗಳನ್ನು ಪುನರ್ವ್ಯಾಖ್ಯಾನ ಮಾಡುವ ಮತ್ತು ಪುನರ್ ವಿಶ್ಲೇಷಿಸುವ ಪ್ರಯತ್ನಗಳು ಶಿಕ್ಷಣಕ್ಕೆ ಸಾರ್ವಜನಿಕ ಧನಸಹಾಯವನ್ನು ಗಣನೀಯವಾಗಿ ಹೆಚ್ಚಿಸುವ ವಿಷಯದಲ್ಲಿ ಸಾರ್ವಜನಿಕರ ಗಮನವನ್ನು ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಕೂಡಿದೆ. ಅಂತಿಮವಾಗಿ ಯು.ಪಿ.ಎ ಸರ್ಕಾರದ ಇತ್ತೀಚಿನ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳಲ್ಲಿ (೨೦೦೪) "ಶಿಕ್ಷಣಕ್ಕಾಗಿ ಮಾಡುವ ಸಾರ್ವಜನಿಕ ವೆಚ್ಚವನ್ನು ರಾಷ್ಟ್ರೀಯ ಆದಾಯದ ಕನಿಷ್ಠ ೬ರಷ್ಟು ಏರಿಸುವ" ವಾಗ್ದಾನದೊಂದಿಗೆ ಈ ವಿವಾದವನ್ನು ತಣ್ಣಗಾಗಿಸಲಾಗಿದೆ.

ಈ ಶಿಫಾರಸಿನ ಮೇಲಿನ ಎರಡನೆಯ ಟೀಕೆ ಎಂದರೆ ಇದಕ್ಕೆ ಯಾವುದೇ ರೀತಿಯ ಸೂಕ್ತವಾದ ಆಧಾರವಿಲ್ಲ ಹಾಗಾಗಿ ಈ ಶಿಫಾರಸಿಗೆ ನಾವು ಯಾವುದೇ ಮಹತ್ತ್ವವನ್ನು ಕೊಡಬೇಕಾಗಿಲ್ಲ ಎನ್ನುವುದು. ವರದಿಯನ್ನು ಎಚ್ಚರಿಕೆಯಿಂದ ಗಮನಿಸಿದರೆ ಅಂತಹ ಟೀಕೆಯು ಸಾಧುವಲ್ಲ ಎನ್ನುವುದು ತಿಳಿಯುತ್ತದೆ. ಆಯೋಗವು ಈ ಹಿಂದೆ ಶಿಕ್ಷಣಕ್ಕಾಗಿ ಮಾಡಿರುವ ವೆಚ್ಚದ ವಿವರಗಳನ್ನು ಪರಿಶೀಲಿಸಿ ಮುಂದಿನ ೨೦ ವರ್ಷಗಳಲ್ಲಿ ಆರ್ಥಿಕ ಬೆಳವಣಿಗೆ (ಶೇಕಡ ೬) ಮತ್ತು ಜನಸಂಖ್ಯೆಯ ಹೆಚ್ಚಳ (ವಾರ್ಷಿಕ ಶೇಕಡ ೨.೧) ಇವುಗಳ ಬಗ್ಗೆ ವಿವೇಚನಾಶೀಲವಾದ ಊಹೆಯನ್ನು ಮಾಡುವ ಮೂಲಕ ಆಯೋಗವು ಭಾರತದಲ್ಲಿ ಮುಂದಿನ ೨೦ ವರ್ಷಗಳಲ್ಲಿ ಶೈಕ್ಷಣಿಕ ಬೆಳವಣಿಗೆಗೆ ಲಭ್ಯವಿರಬೇಕಾದ ಸಂಪನ್ಮೂಲಗಳ ಪ್ರಮಾಣದ ಅಂದಾಜು ಮಾಡುತ್ತದೆ. ವ್ಯವಸ್ಥೆಯ ಅಗತ್ಯತೆಗಳ ವಿವರವಾದ ಅಂದಾಜಿನ ವಿಶ್ಲೇಷಣೆ ಇದು. ವರದಿಯ ಪ್ರಕಾರ. "ಜಗತ್ತಿನ ಶೈಕ್ಷಣಿಕ ಕ್ಷೇತ್ರಗಳಲ್ಲಿ ಮುಂದುವರಿದಿರುವ ದೇಶಗಳಿಗೆ ಹೋಲಿಸಿದರೆ ಶಿಕ್ಷಣಕ್ಕಾಗಿ ವಿನಿಯೋಗಿಸುತ್ತಿರುವ ರಾಷ್ಟ್ರೀಯ ಆದಾಯದ ಪ್ರಮಾಣ ಕಡಮೆ ಇದೆ." ಯುನೆಸ್ಕೊದ ಲಭ್ಯವಿರುವ ಅಂಕಿಅಂಶಗಳನ್ನು ಆಧರಿಸಿ ಕೆಲವು ನಿರ್ದಿಷ್ಟ ದೇಶಗಳ ಪೂರಕ ಅಂಕಿಅಂಶಗಳಿಗೆ ಹೋಲಿಕೆ ಮಾಡಲಾಗಿದೆ: "ಜಪಾನ್, ಅಮೆರಿಕ ಹಾಗೂ ರಷ್ಯಾ ದೇಶಗಳು ರಾಷ್ಟ್ರೀಯ ಆದಾಯದ ಶೇಕಡಾ ೬ ಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಶಿಕ್ಷಣಕ್ಕೆ ವ್ಯಯಿಸುತ್ತವೆ" (ಪು.೮೬೦); ಮತ್ತು ಅವು ಈ ಶತಮಾನದ ಆರಂಭದಲ್ಲಿ ರಾಷ್ಟ್ರೀಯ ಆದಾಯದ ಅತ್ಯಲ್ಪ ಪ್ರಮಾಣದಷ್ಟನ್ನು ಮಾತ್ರ ಶಿಕ್ಷಣಕ್ಕಾಗಿ ವ್ಯಯಿಸುತ್ತಿದ್ದವು, ಎಂದು ಆಯೋಗವು ಹೇಳುತ್ತದೆ. ಈ ದೇಶಗಳು ೧೯೮೬ರ ಹೊತ್ತಿಗೆ ರಾಷ್ಟ್ರೀಯ ಆದಾಯದ ಶೆಕಡಾ ೧೦ರಷ್ಟು ಶಿಕ್ಷಣಕ್ಕಾಗಿ ವ್ಯಯಿಸುವ ಸಾಧ್ಯತೆ ಇದೆ, ವಾಸ್ತವದಲ್ಲಿ ಶೇಕಡಾ ೧೦ಕ್ಕೂ ಮಿಗಿಲಾಗಿ ಎಂದು ಆಯೋಗವು ಅಭಿಪ್ರಾಯ ಪಡುತ್ತದೆ. ಅಷ್ಟೇ ಅಲ್ಲದೆ "ಶಿಕ್ಷಣಕ್ಕಾಗಿ ನಾವು ಮಾಡುತ್ತಿರುವ ಒಟ್ಟು ತಲಾ ವೆಚ್ಚದ ಪ್ರಮಾಣವು ತುಂಬ ಕೈಗಾರೀಕರಣಗೊಂಡಿರುವ ಅಮೆರಿಕಾದ ನೂರನೇ ಒಂದು ಭಾಗದಷ್ಟಿದೆ" ಎಂದು ವರದಿಯಲ್ಲಿ ಹೇಳಲಾಗಿದೆ. ಶೈಕ್ಷಣಿಕ ವೆಚ್ಚದಪರಿಕಲ್ಪನಾತ್ಮಕ ಹಾಗೂ ವ್ಯಾಖ್ಯಾನಕ್ಕೆ ಸಂಬಂಧಿಸಿದ ಅಂಶಗಳನ್ನೂ ಒಳಗೊಂಡಂತೆ ಅನುಸರಿಸಿರುವ ಸಂಶೋಧನಾ ವಿಧಾನಗಳು ಮತ್ತು ಆಯೋಗದ ವಿಶ್ಲೇಷಣೆ ಹಾಗೂ ಗುರಿಗಳ ವಿವರಗಳು ಗೊಂದಲಕ್ಕೆ ಎಡೆ ಮಾಡಿಕೊಡದಷ್ಟು ಸ್ಪಷ್ಟವಾಗಿವೆ. ಶಿಫಾರಸಿಗೆ ಕೊಡಲಾಗಿರುವ ವೈಚಾರಿಕ ನೆಲೆಯೂ ಗಟ್ಟಿಯಾಗಿದೆ ಮತ್ತು ೨೦ ವರ್ಷಗಳ ಅವಧಿಯನ್ನು ನೀಡಿರುವುದರಿಂದ ಗುರಿಯನ್ನು ತಲಪಲು ಸರ್ಕಾರಕ್ಕೆ ಸಾಕಷ್ಟು ಸಮಯಾವಕಾಶವನ್ನು ನೀಡಲಾಗಿದೆ.

ಕೆಲವರ ಪ್ರಕಾರ ರಾಷ್ಟ್ರೀಯ ಆದಾಯದ ಶೇಕಡಾ ೬ ರ ಗುರಿಯು ಅತ್ಯಂತ ಮಹತ್ವಾಕಾಂಕ್ಷೆಯುಳ್ಳದ್ದಾಗಿದೆ. ಆದರೆ ಆಯೋಗದ ಅಭಿಪ್ರಾಯದಲ್ಲಿ ಶಿಕ್ಷಣದ ಆರಂಭಿಕ ಬೆಳವಣಿಗೆಯ ಹಂತದಲ್ಲಿ ಶಿಕ್ಷಣಕ್ಕಾಗಿ ಮಾಡುವ ವೆಚ್ಚವು ಸಾಮಾನ್ಯವಾಗಿ ಆರ್ಥಿಕ ಬೆಳವಣಿಗೆಯ ಎರಡರಷ್ಟಿರಬೇಕು.

ಆದಾಗ್ಯೂ ಮತ್ತು ದಾಖಲಾತಿಯ ಹೆಚ್ಚಳ, ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚಮತ್ತು ಇತರ ಅಳತೆಗೋಲುಗಳನ್ನು ಕಟ್ಟುನಿಟ್ಟಾಗಿ ಮಾಡಿದ್ದರ ಆಧಾರದ ಮೇಲೆ ಶೈಕ್ಷಣಿಕ ವ್ಯವಸ್ಥೆಯ ಅಗತ್ಯಗಳ ಅಂದಾಜನ್ನು ಆಯೋಗವು ದೀರ್ಘ ಕಾಲದ ಹಿಂದೆ ಮಾಡಿದ್ದರಿಂದ ಒಂದರ್ಥದಲ್ಲಿ ಅದರ ಶಿಫಾರಸುಗಳು ಈಗ ಯಾವುದೇ ಪಾವಿತ್ರ್ಯವನ್ನೂ ಉಳಿಸಿಕೊಂಡಿಲ್ಲ. ಹಾಗಿದ್ದೂ ಕೂಡ ಗುರಿಯನ್ನು ಇನ್ನೂ ತಲಪಲು ಸಾಧ್ಯವಾಗಿಲ್ಲವಾದ್ದರಿಂದ ಅದಕ್ಕೆ ತನ್ನದೇ

ಪ್ರಾಮುಖ್ಯ ಇದೆ. ಆಯೋಗದ ಪ್ರಕಾರ ಬದಲಾಗುತ್ತಿರುವ ಪರಿಸ್ಥಿತಿಗಳಲ್ಲಿ "ಅಂದಾಜನ್ನು ನಿರಂತರವಾಗಿ ಪರಿಷ್ಕರಿಸುತ್ತಲೇ ಇರಬೇಕು"(ಪು.೮೯೨).

ಪ್ರಾಥಮಿಕ ಹಂತದಲ್ಲಿ ಗರಿಷ್ಠ ಶಿಕ್ಷಕ-ವಿದ್ಯಾರ್ಥಿ ಅನುಪಾತ, ಒಟ್ಟು ವೆಚ್ಚದಲ್ಲಿ ಶಾಲಾ ಶಿಕ್ಷಣಕ್ಕೆ ಬೇಕಾದ ಕಟ್ಟಡಗಳ ನಿರ್ಮಾಣಕ್ಕೆ ಮತ್ತು ಬಂಡವಾಳವನ್ನು ತೊಡಗಿಸಬೇಕಾದ ಇತರ ಸಂಗತಿಗಳು ಮುಂತಾದವುಗಳಿಗೆ ಕಟ್ಟುನಿಟ್ಟಾದ ಅಳತೆಗೋಲನ್ನು ಬಳಸಲಾಯಿತು, ಮತ್ತು ಉಚಿತ ಸಮವಸ್ತ್ರ, ಲೇಖನ ಸಾಮಗ್ರಿಗಳು, ಉಚಿತ ಮಧ್ಯಾಹ್ನದ ಊಟ ಮತ್ತು ಆರೋಗ್ಯ ಸೇವೆಗಳು, ಮುಕ್ತ ಹಾಗೂ ಕಡ್ಡಾಯ ಶಿಕ್ಷಣ ಇತ್ಯಾದಿಗಳ ಬಗ್ಗೆ ವರದಿಯಲ್ಲಿ ಯಾವುದೇ ಉಲ್ಲೇಖವಿಲ್ಲ ಎನ್ನುವುದು ಆಯೋಗದ ಬಗ್ಗೆ ಮಾಡಬಹುದಾದ ಮೌಲ್ಯಯುತ ಟೀಕೆಯಾಗಿದೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಸಂಪನ್ಮೂಲಗಳ ಅಗತ್ಯದ ಪೂರೈಕೆಯನ್ನು ಅಂದಾಜು ಮಾಡಲು ೧೯೬೫-೬೬ ಘಟಕ ವೆಚ್ಚವನ್ನು ಉಪಯೋಗಿಸಲಾಯಿತು ಮತ್ತು ಸುಮಾರು ಶೇಕಡಾ ೩೦ರಷ್ಟು ವಿದ್ಯಾರ್ಥಿಗಳಿಗೆ ಅರೆಕಾಲಿಕ ಹಾಗೂ ದೂರಸಂಪರ್ಕ ಶಿಕ್ಷಣವನ್ನು ಇದು ಶಿಫಾರಸು ಮಾಡಿತು. ಸಂಪನ್ಮೂಲಗಳ ಕೊರತೆಯಿಂದಾಗಿ ಇದು ಉನ್ನತ ಶಿಕ್ಷಣದ ವಿಸ್ತರಣೆಯನ್ನು ಮಾನವ ಸಂಪನ್ಮೂಲಗಳ ಅಗತ್ಯದ ಮೇರೆಗೆ ಎಚ್ಚರದಿಂದ ಯೋಜನೆ ಮಾಡಬೇಕೆಂದು ಶಿಫಾರಸು ಮಾಡಿತು. ಉನ್ನತ ಹಂತದ ಶಿಕ್ಷಣದಲ್ಲಿ ದಾಖಲಾತಿಯನ್ನು ಮತ್ತು ಪೂರ್ಣಪ್ರಮಾಣದ ಶಿಕ್ಷಣವನ್ನು ಕೊಡುವ ಸ್ಥಳಗಳನ್ನು ಕಡಿತ ಮಾಡಬೇಕು, ಮತ್ತು ಭೌತಿಕ ಸಂಪನ್ಮೂಲ ಹಾಗೂಹಣಕಾಸಿನ ತೊಡಗಿಸುವಿಕೆಯಲ್ಲಿ ಗುಣಮಟ್ಟಕ್ಕೆ ತೊಂದರೆಯಾಗದಂತೆ ಮಿತವನ್ನು ಸಾಧಿಸಬೇಕೆಂದು ಆಯೋಗವು ಶಿಫಾರಸು ಮಾಡುತ್ತದೆ. ಹಾಗಾಗಿ ಸಂಪನ್ಮೂಲಗಳ ಅಗತ್ಯದ ಬಗ್ಗೆ ಮಾಡುವ ಯಾವುದೇ ತರಹದ ಅಂದಾಜುಗಳು ಅಂಕಿಯನ್ನು ರಾಷ್ಟ್ರೀಯ ಆದಾಯದ ಶೇಕಡ ೬ಕ್ಕಿಂತ ಮೇಲಕ್ಕೇರಿಸುತ್ತದೆ.

ರಾಷ್ಟ್ರೀಯ ಆದಾಯದ ಶೇಕಡ ೬ನ್ನು ಹಂಚಿಕೆ ಮಾಡಬೇಕೆಂಬ ಪ್ರಧಾನವಾದ ಶಿಫಾರಸನ್ನು ಅನಂತರ ಹಲವು ಅಂತಾರಾಷ್ಟ್ರೀಯ ಸಂಸ್ಥೆಗಳು ಬೆಂಬಲಿಸುತ್ತವೆ. ಡೆಲೋರ್ಸ್ ಆಯೋಗವು (೧೯೯೬) ಸ್ಪಷ್ಟವಾಗಿ ಹೇಳುವಂತೆ: "ಶಿಕ್ಷಣದಮೇಲೆ, ಇತರ ಆಯವ್ಯಯ ಶೀರ್ಷಿಕೆಗಳ ಜಾಗದಲ್ಲಿ, ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು ಎಂಬುದನ್ನು ಎಲ್ಲೆಡೆಯಲ್ಲೂ, ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ, ಅಗತ್ಯವಾದುದೆಂದೆ ಪರಿಗಣಿಸಬೇಕು. ಏಕೆಂದರೆ ಇದು ಭವಿಷ್ಯದ ಅತ್ಯಂತ ಮಹತ್ತ್ವದ ಹೂಡಿಕೆಯಾಗಿದೆ. *ಒಂದು ಸಾಮಾನ್ಯ ನಿಯಮವಾಗಿ ರಾಷ್ಟ್ರೀಯ ಉತ್ಪನ್ನದ ಶೇಕಡ ೬ಕ್ಕಿಂತ ಕಡಮೆ ಇಲ್ಲದಂತೆ ಶಿಕ್ಷಣಕ್ಕೆ ವಿನಿಯೋಗಿಸಬೇಕು.* (ಪು. ೧೬೫, ಒತ್ತು ನನ್ನದು). ಯುನೆಸ್ಕೊ ಮತ್ತು ಯುಎನ್‌ಡಿಪಿ ಕೂಡ ಇದು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅಗತ್ಯವಾದುದು ಎಂದು ಅಭಿಪ್ರಾಯಪಡುತ್ತವೆ.

ಶಿಫಾರಸುಗಳನ್ನು ಅನುಮೋದಿಸಿದರೂ ಮತ್ತು ಅನಂತರದಲ್ಲಿ ಸಂಸತ್ತಿನಲ್ಲಿ ಒಪ್ಪಿಗೆ ಪಡೆದ ರಾಷ್ಟ್ರೀಯ ಶಿಕ್ಷಣ ನೀತಿ ೧೯೬೮ ಮತ್ತು ೧೯೮೬ ರಲ್ಲಿ ಇದನ್ನು ಅಳವಡಿಸಿಕೊಂಡಿದ್ದರೂ ಕೂಡ ಇದರ ಅನುಷ್ಠಾನ ತುಂಬ ಕುಂಠಿತವಾಗಿದೆ. ಶಿಕ್ಷಣದ ಮೇಲೆ ವ್ಯಯ ಮಾಡಿದ ರಾಷ್ಟ್ರೀಯ ಉತ್ಪನ್ನದ ಶೇಕಡಾವಾರು ಪ್ರಮಾಣವು ೧೯೫೧-೫೨ರಲ್ಲಿ ಶೇಕಡ ೦.೬ ಇದ್ದುದನ್ನು ೧೯೬೭-೬೮ರಲ್ಲಿ ೧.೭ ಅಂದರೆ ಮೂರರಷ್ಟು ಹೆಚ್ಚಿಸಲಾಯಿತು. ಈ ಹೆಚ್ಚಳವು ೧೯೬೮ರ ಅನಂತರ ಸಾಪೇಕ್ಷವಾಗಿ ಇಳಿಮುಖವಾಗುತ್ತಾ ಹೋಯಿತು; ಇದರ ಪ್ರಮಾಣವು ೧೯೬೮-೬೯ ರಲ್ಲಿದ್ದ ಶೇಕಡ ೧.೭ರಿಂದ ೧೯೮೫-೮೬ರಲ್ಲಿ ಎರಡರಷ್ಟು ಅಂದರೆ

ಶೇಕಡ ೩.೫ರಷ್ಟು ಹೆಚ್ಚಳವಾಯಿತು; ಇದು ಅನಂತರ ಅಲ್ಲಿಗೆ ಸ್ಥಗಿತವಾಯಿತು ೧೯೮೬-೮೭ರಲ್ಲಿ ಶೇಕಡ ೩.೪ ಇದ್ದದ್ದು ೨೦೦೪-೦೫ರಲ್ಲಿ ೩.೮ ರಷ್ಟಾಯಿತು. ದೀರ್ಘಕಾಲದಲ್ಲಿ ಇದು ನಿರಂತರವಾಗಿ ಹೆಚ್ಚಾಗುತ್ತಲೆ ಹೋಗಬೇಕು ಎಂದು ಯಾರೂ ನಿರೀಕ್ಷಿಸುವುದಿಲ್ಲ, ಆದರೆ ವಾಸ್ತವದಲ್ಲಿ ಆಯೋಗದ ಅವಧಿಯ ಅನಂತರದ ಕಾಲದಲ್ಲಿ ಏರಿಕೆಯ ಪ್ರಮಾಣ ಕಡಮೆಯಾಗುತ್ತಾ ಹೋಗಿದೆ, ಮತ್ತು ೧೯೮೬ರ ಅವಧಿಯಲ್ಲಿ ಇದು ಮತ್ತಷ್ಟು ಕಡಮೆಯಾಯಿತು.

ಷಾ (೨೦೦೬) ಅವರು ಹೇಳಿರುವಂತೆ, "ಈ ವಿಷಯಕ್ಕೆ ಸಂಬಂಧಿಸಿದಂತೆ ದೀರ್ಘಕಾಲದ ಮತ್ತು ಮನಸ್ಸಿಗೆ ನೋವುಂಟುಮಾಡುವ ಧೋರಣೆ ಎಂದರೆ ಆರ್ಥಿಕ ಬೆಳವಣಿಗೆ ಕಡಮೆ ಇದ್ದ ಅವಧಿಗೆ (೧೯೬೬-೬೭ ರಿಂದ ೧೯೮೫-೮೬) ಹೋಲಿಸಿದಾಗ ಉತ್ತಮ ಆರ್ಥಿಕ ಬೆಳವಣಿಗೆಯ ಅವಧಿಯಲ್ಲಿ (೧೯೮೬-೮೭ರಿಂದ ೨೦೦೧-೦೨) ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸರ್ಕಾರದ ಪ್ರಯತ್ನ ಸಡಿಲವಾಗುತ್ತಾ ಹೋದದ್ದು." ಭಾರತ ಮತ್ತು ಇತರೆಡೆಗಳಲ್ಲಿ ಅಂತಹ ಧೋರಣೆಗಳನ್ನು ವಿಶ್ಲೇಷಣೆಗೊಳಪಡಿಸಿದ ತಿಲಕ್ (೧೯೮೪-೮೬ಎ) ಅವರು ಗಮನಿಸುವಂತೆ ಒಂದು ರಾಷ್ಟ್ರವು ರಾಷ್ಟ್ರೀಯ ಆದಾಯದ ಶೇಕಡಾ ಎಷ್ಟನ್ನು ಶಿಕ್ಷಣಕ್ಕೆ ಹಂಚಿಕೆ ಮಾಡುತ್ತದೆ ಎನ್ನುವುದು ಆ ದೇಶದ ಆರ್ಥಿಕ ಬೆಳವಣಿಯಿಂದ ನಿರ್ಣಯಿಸಲ್ಪಡುವುದಿಲ್ಲ ಬದಲಿಗೆ ಇತರ ಅಂಶಗಳಿಂದ, ಅತ್ಯಂತ ಮುಖ್ಯವಾಗಿ ರಾಜಕೀಯ ಇಚ್ಛಾಶಕ್ತಿಯಿಂದ ನಿರ್ಧರಿಸಲ್ಪಡುತ್ತದೆ.

ಚಿತ್ರ ೧: ಒಟ್ಟು ಉತ್ಪನ್ನದಲ್ಲಿ ರಾಷ್ಟ್ರೀಯ ಶಿಕ್ಷಣದ ಮೇಲೆ ಮಾಡಿರುವವೆಚ್ಚದಪಾಲು (ಶೇಕಡಾವಾರು)

ಚಿತ್ರ ೨: ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣದ ಮೇಲಿನ ವೆಚ್ಚ (ಒಟ್ಟು ಮೊತ್ತದ ಶೇಕಡಾವಾರು)

ಮೂಲ: ತಿಲಕ್ (೨೦೦೩)

ಚಿತ್ರ ೩: ಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕಾಗಿ ಆಂತರಿಕ ವಲಯಗಳ ಸಂಪನ್ಮೂಲಗಳ ಹಂಚಿಕೆ

೧೯೬೦ರ ಆರಂಭದಲ್ಲಿ ಶಿಕ್ಷಣಕ್ಕಾಗಿ ಹಂಚಿಕೆ ಮಾಡಿದ ರಾಷ್ಟ್ರೀಯ ಆದಾಯದ ಸರಾಸರಿ ಪ್ರಮಾಣವು ಶೇಕಡ ೪ನ್ನು ಮೀರಿತ್ತು. ಆದರೆ ಆ ಮಟ್ಟವನ್ನು ಕಾಪಾಡಿಕೊಂಡು ಬರಲಾಗಲಿಲ್ಲ. ಹಾಗಾಗಿ ಪ್ರಮುಖವಾದ ಶಿಫಾರಸು "ಅನುಮೋದಿಸಿದ ಮತ್ತು ವ್ಯಾಪಕವಾಗಿ ಗಮನವನ್ನು ಸೆಳೆದ ಆದರೆ ಅನುಷ್ಠಾನಗೊಳಿಸದ ಶಿಫಾರಸುಗಳ"ವರ್ಗೀಕರಣಕ್ಕೆ ಸೇರುತ್ತದೆ. ಏನೇ ಆದರೂ ಗುರಿಯನ್ನು ಮುಟ್ಟಿದ ವಿವರವಾದ ಹಣಕಾಸಿನ ಯೋಜನೆಯ ಬಗ್ಗೆ ಎಂದಿಗೂ ಯೋಚಿಸಲೇ ಇಲ್ಲ. ಹಳೆಯ ಧೋರಣೆಗಳು ಮುಂದುವರಿದರೆ ಈ ದಿಕ್ಕಿನಲ್ಲಿ ಯಾವುದೇ ಮಹತ್ತ್ವದ ಪ್ರಯತ್ನಗಳನ್ನು ಮಾಡಲಾಗುವುದಿಲ್ಲ, ಪರಿಸ್ಥಿತಿ ಮತ್ತಷ್ಟು ಹದಗೆಡಬಹುದು ಮತ್ತು ಬಹಳ ದೀರ್ಘಕಾಲದವರೆಗೂ ಗುರಿಯು ಕೈತಪ್ಪಿ ಹೋಗುತ್ತಲೇ ಇರುತ್ತದೆ ಎಂದು ತಿಲಕ್ (೨೦೦೬) ತೋರಿಸಿದ್ದಾರೆ.

ಆಸಕ್ತಿಕರ ಅಂಶವೆಂದರೆ ಚಿತ್ರ ೨ರಲ್ಲಿ ತೋರಿಸಿರುವಂತೆ ಆಯೋಗದ ಅನಂತರದ ಕಾಲದಲ್ಲಿಪಂಚವಾರ್ಷಿಕ ಯೋಜನೆಗಳಲ್ಲಿ ಶಿಕ್ಷಣಕ್ಕೆ ಕೊಟ್ಟಿರುವ ಪ್ರಾಮುಖ್ಯವು ಸಾಪೇಕ್ಷವಾಗಿ ಕಡಮೆಯಾಗುತ್ತಲೇ ಹೋಗಿರುವುದನ್ನೂ ಕೂಡ ಗಮನಿಸಬಹುದಾಗಿದೆ. ಮೊದಲ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಒಟ್ಟು ಪಂಚವಾರ್ಷಿಕ ಯೋಜನೆಯ ಸರಾಸರಿ ಶೇಕಡ ೭ರಷ್ಟಿದ್ದರೆ ಆಯೋಗವು ವರದಿ ಸಲ್ಲಿಸಿದ ಅನಂತರದ ಅವಧಿಯ ಮೊದಲ ಪಂಚವಾರ್ಷಿಕ ಯೋಜನೆ ಅಂದರೆ ನಾಲ್ಕನೆಯ ಯೋಜನೆಯಲ್ಲಿ ಅದರ ಸರಾಸರಿ ಶೇಕಡಾ ಐದಕ್ಕೆ ಇಳಿಯಿತು. ಇದೇ ಅವಧಿಯಲ್ಲಿಯೆ ರಾಷ್ಟ್ರೀಯ ಶಿಕ್ಷಣ ನೀತಿ ೧೯೬೮ನ್ನು ಮಂಡಿಸಲಾಯಿತು. ಇದು ಅನಂತರ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೩.೩ಕ್ಕೆ ಮತ್ತು ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡ ೨.೭ಕ್ಕೆ ಇಳಿಯಿತು.

ಯುದ್ಧ, ಬರಗಾಲ ಮತ್ತು ಹಣದುಬ್ಬರದಂತಹ ಹಲವಾರು ಅಂಶಗಳು ಇದಕ್ಕೆ ಕಾರಣವಾಗಿದ್ದವಾದರೂ "ಶಿಕ್ಷಣಕ್ಕೆ ಮಾಡಬೇಕಾದ ಹಂಚಿಕೆಯನ್ನು ಹೆಚ್ಚಿಸುವ ಪ್ರಯತ್ನ ತೀವ್ರಗೊಳ್ಳಬೇಕು" (ಪು.872) ಎನ್ನುವ ಆಯೋಗದ ಬಲವಾದ ಶಿಫಾರಸನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಲಿಲ್ಲ ಎನ್ನುವುದಂತೂ ಸತ್ಯ. ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ಕ್ಕೆ ಸಂಸತ್ತಿನಲ್ಲಿ ಅನುಮೋದನೆ ಸಿಕ್ಕನಂತರವಷ್ಟೆ ಈ ಧೋರಣೆಯಲ್ಲಿ ಬದಲಾವಣೆ ಕಂಡುಬಂದಿತು. ಹಾಗಿದ್ದೂ ಕೂಡ ಒಂಬತ್ತನೆಯ ಮತ್ತು ಬಹುಶಃ ಹತ್ತನೆಯ ಯೋಜನೆಯಲ್ಲಿ ಮಾಡಲಾದ ಹಂಚಿಕೆಯೂ ಕೂಡ ಮೊತ್ತಮೊದಲ ಪಂಚವಾರ್ಷಿಕ ಯೋಜನೆಯ ಹಂಚಿಕೆಗಿಂತಲೂ ಕಡಮೆಯಾಗಿತ್ತು.

ಶಿಕ್ಷಣದ ವಿವಿಧ ಹಂತಗಳಿಗೆ ಮಾಡಿದ ಹಂಚಿಕೆ

ಆಯೋಗವು ಒಟ್ಟು ಶಿಕ್ಷಣಕ್ಕೆ ಅಗತ್ಯವಾದ ಅಂದಾಜನ್ನು ಮಾಡಿದ್ದಷ್ಟೆ ಅಲ್ಲ, ಅದು ಶಿಕ್ಷಣದಲ್ಲಿ ಸಂಪನ್ಮೂಲಗಳ ಅಂತರ್ವಲಯದ ಹಂಚಿಕೆಯ, ಅಂದರೆ ಶಿಕ್ಷಣದ ವಿವಿಧ ಹಂತಗಳ ನಡುವಿನ ಸಂಪನ್ಮೂಲಗಳ ಹಂಚಿಕೆಯ, "ಅತ್ಯುತ್ತಮ"ವಿನ್ಯಾಸಗಳನ್ನೂ ಕೂಡ ಶಿಫಾರಸು ಮಾಡಿತ್ತು. ಮೊದಲಿಗೆ, ನಾವು ಗಮನಿಸಬೇಕಾದ್ದೆಂದರೆ ಶಿಕ್ಷಣದ ವಿವಿಧ ಹಂತಗಳ ನಡುವೆ ಇರುವ ಪರಸ್ಪರಾವಲಂಬನೆಯನ್ನು ಆಯೋಗವು ಗುರುತಿಸುತ್ತದೆ ಮತ್ತು ಶಿಕ್ಷಣದ

ಅಭಿವೃದ್ಧಿಗೆ ಒಂದು ಸಮತೋಲನವುಳ್ಳ ಸಮಗ್ರವಾದ ದೃಷ್ಟಿಕೋನವನ್ನು ಅದು ಅಳವಡಿಸಿಕೊಳ್ಳುತ್ತದೆ.

ಜಪಾನಿನ ಅನುಭವವನ್ನು ಉಲ್ಲೇಖಿಸುತ್ತಾ (ಪು.೮೬೩-೬೫) ಆಯೋಗವು ಅಪರೋಕ್ಷವಾಗಿ ಶಿಕ್ಷಣದ ವಿವಿಧ ಹಂತಗಳ ನಡುವೆ ಮಾಡುವ ಹಂಚಿಕೆಯಲ್ಲಿ ಒಂದು ತರಹದ ಅನುಕ್ರಮಣಿಕೆಯ ವಿನ್ಯಾಸವನ್ನು ಪ್ರತಿಪಾದಿಸುತ್ತದೆ – ಮೊದಲಿಗೆ ಪ್ರಾಥಮಿಕ ಶಿಕ್ಷಣ, ಅನಂತರ ದ್ವಿತೀಯ ಹಂತ ಮತ್ತು ಅನಂತರ ಉನ್ನತ ಶಿಕ್ಷಣ. ಭಾರತದಲ್ಲಿ ಕಾಲದಿಂದಲೂ ಬೆಳೆದುಬಂದ ಐತಿಹಾಸಿಕ ಒಲವುಗಳನ್ನು, ವಿಶೇಷವಾಗಿ ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಮತ್ತು ಆಗಿನ ಸಮಯದಲ್ಲಿದ್ದ ವಿವಿಧ ಹಂತಗಳ ಶಿಕ್ಷಣದ ಬೆಳವಣಿಗೆ ಮತ್ತು ಮುಂದಿನ ೨೦ ವರ್ಷಗಳ ಕಾಲದ ಬೆಳವಣಿಗೆಯ ಹಾದಿಯನ್ನು ಗಮನದಲ್ಲಿಟ್ಟುಕೊಂಡು ಆಯೋಗವು ೧೯೬೫ರಿಂದ ೧೯೭೫ರವರೆಗೆ ಶಾಲೆಯ ಹಂತದಲ್ಲಿ ಹೆಚ್ಚು ವೆಚ್ಚ ಮಾಡುವುದಕ್ಕೆ ಒತ್ತು ನೀಡಬೇಕು; ೧೯೭೫ರಿಂದ ೧೯೮೫ರ ದಶಕದ ಅವಧಿಯಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ, ದ್ವಿತೀಯ ಹಂತದಲ್ಲಿ ವೃತ್ತಿಪರ ಶಿಕ್ಷಣ ಇತ್ಯಾದಿಗೆ ಒತ್ತು ನೀಡಬೇಕು ಎಂದು ಭಾವಿಸುತ್ತದೆ. "೧೯೮೫ರ ನಂತರ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಹೆಚ್ಚಿನ ಒತ್ತು ಕೊಡಬೇಕು" (ಪು.೮೯೩). ಅದು ಮುಂದುವರಿದು ಹೇಳುವುದೇನೆಂದರೆ: "ಸಮಾಜಗಳು ಕೈಗಾರಿಕೀಕರಣಗೊಳ್ಳುತ್ತಾ ಹೋದ ಹಾಗೆ, ಶಿಕ್ಷಣದ ಮೇಲಿನ ಒಟ್ಟು ವೆಚ್ಚ ಹೆಚ್ಚಾಗುತ್ತಾ ಹೋಗುತ್ತದೆ ಮತ್ತು ಇದರ ಬಹಳಷ್ಟು ಪಾಲು ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಮೀಸಲಿಡಬೇಕಾಗುತ್ತದೆ"(ಪು.೮೬೧).

ಆದರೆ ಅನುಸರಿಸಲಾದ ಅಂತರ್ವಲಯದ ಹಂಚಿಕೆಯು ಇದ್ದಕ್ಕೆ ತದ್ವಿರುದ್ಧವಾಗಿದ್ದ ಹಾಗೆ ಕಾಣುತ್ತದೆ; ಆಯೋಗದ ಅವಧಿಯ ತತ್‌ಕ್ಷಣದಲ್ಲೇ ಒಟ್ಟು ಪಂಚವಾರ್ಷಿಕ ಯೋಜನೆಯ ವೆಚ್ಚದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟ ಪ್ರಾಮುಖ್ಯವು ಒಂದೋ ಸ್ಥಿರವಾಗಿತ್ತು ಇಲ್ಲವೆ ಶೇಕಡ ೩೦ರ ಆಸುಪಾಸಿನಲ್ಲಿತ್ತು ಅಥವಾ ಸ್ವಲ್ಪ ಮಟ್ಟಿಗೆ ಕೆಳಮುಖವಾಗಿತ್ತು. ಆದರೆ ಚಿತ್ರ ೩ರಲ್ಲಿ ತೋರಿಸಿರುವಂತೆ ಉನ್ನತ ಶಿಕ್ಷಣದ ಪಾಲು ಮೂರನೆಯ ಯೋಜನೆಯಲ್ಲಿ ಶೇಕಡ ೧೫ ಇದ್ದದ್ದು ನಾಲ್ಕನೆಯ ಯೋಜನೆಯಲ್ಲಿ ಶೇ. ೨೫ಕ್ಕೆ ಏರಿಕೆಯಾಯಿತು (ಮತ್ತು ಐದನೆಯ ಯೋಜನೆಯಲ್ಲಿ ಶೇ.೨೨). ಬೇಡಿಕೆಯು ಹೆಚ್ಚಾಗಿದ್ದ ಕಾರಣ ದ್ವಿತೀಯ ಹಂತದ ಮತ್ತು ಉನ್ನತ ಶಿಕ್ಷಣದ ಮೇಲಿನ ಒತ್ತಡ ಹೆಚ್ಚಾಗುತ್ತಾ ಹೋಯಿತು. ಏಳನೆಯ ಪಂಚವಾರ್ಷಿಕ ಯೋಜನೆಯ ಅನಂತರ ಉನ್ನತ ಶಿಕ್ಷಣದ ಹಂಚಿಕೆಯು ತೀವ್ರಗತಿಯಲ್ಲಿ ಇಳಿಮುಖವಾಯಿತು.

ಇದಲ್ಲದೆ, ಶಿಫಾರಸುಗಳು ತರ್ಕಬದ್ಧವಾಗಿದ್ದು ಆ ಕಾರಣದಿಂದಾಗಿ ಸರಿ ಎನಿಸಿದರೂ ಕೂಡ ಮೊದಲು ಪ್ರಾಥಮಿಕ ಅನಂತರ ದ್ವಿತೀಯ ಹಂತ ಮತ್ತು ಅನಂತರ ಉನ್ನತ ಶಿಕ್ಷಣ ಎನ್ನುವ ಈ ಸಾಂಪ್ರದಾಯಿಕ ಕ್ರಮಾನುಸರಣೆಯು ಪ್ರಯೋಜನಕ್ಕೆ ಬರುವುದಿಲ್ಲ ಎನ್ನುವುದು ಈಗ ಹೆಚ್ಚು ಚೆನ್ನಾಗಿ ಅರಿವಿಗೆ ಬರತೊಡಗಿದೆ. ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಶಿಕ್ಷಣವು ಸಂಪೂರ್ಣವಾಗಿ ಸಾರ್ವತ್ರಿಕಗೊಳ್ಳುವ ಅಥವಾ ವ್ಯಾಪಕವಾಗಿ ವಿಸ್ತರಿಸುವವರೆಗೂ ಉನ್ನತ ಶಿಕ್ಷಣವು ಕಾಯಲು ಸಾಧ್ಯವಿಲ್ಲ (ತಿಲಕ್ ೨೦೦೧). ಒಂದರ್ಥದಲ್ಲಿ ಆಯೋಗವು ಇದನ್ನು ಗುರುತಿಸಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯಕ್ಕೆ ಒತ್ತು ಕೊಡುತ್ತಲೆ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಉತ್ತಮಪಡಿಸುವಿಕೆಗೆ ವಿಶೇಷ ಒತ್ತು ನೀಡಲಾಗಿದೆ. ಅನಂತರ ವಿವರಿಸಿರುವಂತೆ ಉನ್ನತ ಶಿಕ್ಷಣ ಹಾಗೂ ಸಂಶೋಧನೆಯ ವಿವಿಧ ಅಂಶಗಳಿಗೆ

ಸಂಪನ್ಮೂಲಗಳ ಹಂಚಿಕೆಯನ್ನು ಅದು ಶಿಫಾರಸು ಮಾಡಿದೆ. ದೀರ್ಘಕಾಲಾವಧಿಯಲ್ಲಿ ಆಯೋಗವು ಸಂಪನ್ಮೂಲಗಳ ಸಮಾನ ವಿತರಣೆಯ ಪರವಾಗಿತ್ತು, ಉದಾಹರಣೆಗೆ ೧೯೬೫-೬೬ರಲ್ಲಿ ಹೆಚ್ಚು ಕಡಮೆ ಮೂರನೆಯ ಒಂದು ಭಾಗವನ್ನು ಪ್ರಾಥಮಿಕ ಶಿಕ್ಷಣಕ್ಕೆ, ಮೂರನೆಯ ಒಂದು ಭಾಗವನ್ನು ದ್ವಿತೀಯ ಹಂತದ ಶಿಕ್ಷಣಕ್ಕೆ ಮತ್ತು ಮಿಕ್ಕ ಮೂರನೆ ಒಂದು ಭಾಗವನ್ನು ಉನ್ನತ ಶಿಕ್ಷಣಕ್ಕೆ ನೀಡಲಾಯಿತು (ಪು. ೮೬೮).

ಗಮನಿಸಬೇಕಾದ ಒಂದು ಸಂಗತಿ ಎಂದರೆ, ಆಯೋಗವು ಶಿಕ್ಷಣದ ಎಲ್ಲ ಹಂತಗಳ, ವಿಶೇಷವಾಗಿ ಒಂದೆಡೆಯಿಂದ ಪ್ರಾಥಮಿಕ ಶಿಕ್ಷಣದ ಮತ್ತೊಂದೆಡೆಯಿಂದ ಉನ್ನತ ಶಿಕ್ಷಣ ಹಾಗೂ ಸಂಶೋಧನೆಗಳ ಪ್ರಾಮುಖ್ಯವನ್ನು ಗುರುತಿಸಿದೆ. ಸಂಪನ್ಮೂಲಗಳ ಹಂಚಿಕೆಯಲ್ಲಿ ಒಂದು ಹಂತದ ಶಿಕ್ಷಣಕ್ಕೆ ಎದುರಾಗಿ ಮತ್ತೊಂದು ಹಂತವನ್ನು ಇಡುವ ಕೆಲಸವನ್ನು ಅದು ಮಾಡಲಿಲ್ಲ. ಪ್ರಾಥಮಿಕ ಶಿಕ್ಷಣದ ವೆಚ್ಚವನ್ನು ಹೆಚ್ಚಿಸುವ ಪರವಾಗಿದ್ದು ಉನ್ನತ ಶಿಕ್ಷಣದ ಹಂಚಿಕೆಯಲ್ಲಿ ಕಡಿತ ಮಾಡುವುದನ್ನಾಗಲಿ ಅಥವಾ ಅದಕ್ಕೆ ತದ್ವಿರುದ್ಧವಾದ ನಿಲುವನ್ನಾಗಲಿ ಆಯೋಗವು ತೆಗೆದುಕೊಳ್ಳಲಿಲ್ಲ. "ಉನ್ನತ ಶಿಕ್ಷಣವನ್ನು ಅಭಿವೃದ್ಧಿಪಡಿಸಬೇಕಾದ ಅಗತ್ಯವನ್ನು ಮತ್ತು ಅದಕ್ಕಾಗಿ ಸಂಪನ್ಮೂಲಗಳ ಹೆಚ್ಚುವರಿ ಹಂಚಿಕೆ ಮಾಡಬೇಕಾಗಿರುವುದನ್ನು ನಾವು ಮನಗಂಡಿದ್ದೇವೆ. ಆದರೆ ಈ ಉದ್ದೇಶಕ್ಕೋಸ್ಕರ ಪ್ರಾಥಮಿಕ ಶಿಕ್ಷಣದ ವೆಚ್ಚವನ್ನು ಕಡಿತಗೊಳಿಸುವುದು ಸೂಕ್ತವಲ್ಲ"(ಪು.೮೭೬) ಎಂದು ಆಯೋಗವು ಸ್ಪಷ್ಟಪಡಿಸುತ್ತದೆ. ಮುಂದುವರಿದು "ಸಾಮಾಜಿಕ ನ್ಯಾಯದ ನೆಲೆಯಿಂದ ಮತ್ತು ರಾಷ್ಟ್ರೀಯ ಆರ್ಥಿಕತೆಯಲ್ಲಿ ಬದಲಾವಣೆಯನ್ನು ತರಲು ಸಹಾಯ ಮಾಡುವ ದೃಷ್ಟಿಯಿಂದ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು ಅತ್ಯಂತ ಮುಖ್ಯವಾದುದು. ಹಾಗೆಯೆ, ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಭಿವೃದ್ಧಿ ಅತ್ಯಂತ ಕೇಂದ್ರವಾದುದಾಗಿದೆ, ಮತ್ತು ಸರಿಯಾದ ರೀತಿಯಲ್ಲಿ ಉನ್ನತ ಶಿಕ್ಷಣವನ್ನು ಒದಗಿಸದಿದ್ದರೆ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ಶಿಕ್ಷಣಕ್ಕೆ ಸಾಕಷ್ಟು ಸಮರ್ಥ ಶಿಕ್ಷಕರನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ನಮಗೆ ಬೇಕಾಗಿರುವುದು *ಶಿಕ್ಷಣದ ಸಮತೋಲನ ಅಭಿವೃದ್ಧಿ"* (ಪು. ೮೭೬) ಎನ್ನುವುದನ್ನು ಆಯೋಗವು ಒತ್ತಿ ಹೇಳುತ್ತದೆ. ಇದನ್ನೆ ೧೮೯೫ರಲ್ಲಿ ಪೂನಾದ ಕಾಂಗ್ರೆಸ್‌ನ ಅಧ್ಯಕ್ಷೀಯ ಭಾಷಣದಲ್ಲಿ ಸುರೇಂದ್ರನಾಥ ಬ್ಯಾನರ್ಜಿಯವರು ಹೇಳಿದ್ದು. "ನಾವು ಉನ್ನತ ಶಿಕ್ಷಣದ ಎದುರು ಪ್ರಾಥಮಿಕ ಶಿಕ್ಷಣ ಎನ್ನುವುದರ ಪರವಾಗಿಲ್ಲ. ನಾವು ಉನ್ನತ ಅಥವಾ ಕೆಳಗಿನ, ಎಲ್ಲ ಹಂತದ ಶಿಕ್ಷಣದ ಪರವಾಗಿದ್ದೇವೆ. ಅವು ಒಂದನ್ನೊಂದು ಪರಸ್ಪರ ಪ್ರತಿಕ್ರಿಯಿಸುತ್ತವೆ ಮತ್ತು ಪ್ರಭಾವಿಸುತ್ತವೆ. ಅವು ಸಮಾನವಾದ ಮತ್ತು ವಿಭಜಿಸಲಾಗದ ವ್ಯವಸ್ಥೆಯ ಭಾಗವಾಗಿವೆ."

ಮತ್ತೆ ಸರ್ಕಾರವು ಇಂತಹ ಅನುಭವದ ನುಡಿಗಳಿಂದ ಪಾಠ ಕಲಿತಂತೆ ಕಾಣುವುದಿಲ್ಲ ಪಂಚವಾರ್ಷಿಕ ಯೋಜನೆಗಳಲ್ಲಿ ಸಂಪನ್ಮೂಲಗಳ ಹಂಚಿಕೆ ಮಾಡುವಾಗ ಸರ್ಕಾರವು ಒಂದೊ ಪ್ರಾಥಮಿಕ ಶಿಕ್ಷಣಕ್ಕೆ ಧನಸಹಾಯ ಮಾಡುತ್ತದೆ ಇಲ್ಲವೆ ಉನ್ನತ ಶಿಕ್ಷಣದಲ್ಲಿ ಮಾಡುತ್ತದೆ ಎರಡಕ್ಕೂ ಮಾಡುವುದು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಒಂದು ಹಂತವನ್ನು ಮತ್ತೊಂದಕ್ಕೆ ಎದುರಾಗಿ ತಂದು ನಿಲ್ಲಿಸಿತು. ಪರಿಣಾಮವಾಗಿ ವಿವಿಧ ಹಂತಗಳಿಗೆ ಧನಸಹಾಯವನ್ನು ಮಾಡುವ ವಿಷಯದಲ್ಲಿ ಅದು ವಿಭಿನ್ನವಾದ ಕೆಲವೊಮ್ಮೆ ವೈರುಧ್ಯಪೂರ್ಣವಾದ ದೃಷ್ಟಿಕೋನವನ್ನು ಅಳವಡಿಸಿಕೊಂಡಿತು. ಮೂಲಭೂತವಾಗಿ ಪರಿಪೂರ್ಣವಾದ ಸಮಗ್ರವಾದ ದೃಷ್ಟಿಕೋನದ ಬದಲು ಸರಕಾರವು ಶಿಕ್ಷಣದ ವಿವಿಧ

ಹಂತಗಳನ್ನು ಅವು ಸಂನ್ಮೂಲಗಳಿಗೋಸ್ಕರ ಪರಸ್ಪರ ಪೈಪೋಟಿ ಮಾಡುತ್ತಿವೆಯೇನೋ ಎನ್ನುವಂತೆ ನೋಡುವ ಮೂಲಕ ವಿಚ್ಛಿನ್ನ ದೃಷ್ಟಿಕೋನವನ್ನು ಅಳವಡಿಸಿತು.

ಅಂತರ್ ಕಾರ್ಯಕ್ರಮಗಳ ಹಂಚಿಕೆ: ಆದ್ಯತೆಯ ಸಂಗತಿಗಳು

ಆಯೋಗವು ಶಿಕ್ಷಕರ ವೇತನದಲ್ಲಿ ಗಣನೀಯ ಏರಿಕೆಗೆಶಿಫಾರಸು ಮಾಡಿದೆ, ಮತ್ತು "ಶಿಕ್ಷಕೇತರ" ಸಂಗತಿಗಳು ಮತ್ತು ಅವುಗಳ ವೆಚ್ಚಕ್ಕೂ ಕೂಡ. ಶಿಕ್ಷಕೇತರ ವೆಚ್ಚವು ಅತ್ಯಂತ ಕಡಮೆ ಇರುವುದರಿಂದಾಗಿ "ನಮ್ಮ ಶಾಲೆಗಳು ಸತ್ತ್ವಹೀನವಾಗಿವೆ ಮತ್ತು ಬರಡಾಗಿವೆ" ಎಂದು ಅದು ಪರಿಗಣಿಸುತ್ತದೆ (ಪು. ೮೭೮). ಈ ವೆಚ್ಚವು ಪ್ರಾಥಮಿಕ (ಕೆಳಗಿನ ಮತ್ತು ಮೇಲ್ ಹಂತದ ಪ್ರಾಥಮಿಕ) ಹಂತದಲ್ಲಿ ಕನಿಷ್ಠ "ಶಿಕ್ಷಕರ" ವೆಚ್ಚದ ಶೇಕಡ ೨೦ರಷ್ಟಿರಬೇಕು, ದ್ವಿತೀಯ ಹಂತದಲ್ಲಿ ಮೂರನೆಯ ಒಂದು ಭಾಗದಷ್ಟಿರಬೇಕು ಎಂದು ಆಯೋಗವು ಶಿಫಾರಸು ಮಾಡುತ್ತದೆ. ಶಿಕ್ಷಣದ ಮೇಲಿನ ಒಟ್ಟು ವೆಚ್ಚದ ಕನಿಷ್ಠ ಶೇಕಡ ೨.೫ ರಷ್ಟು ಕಟ್ಟಡ ಹಾಗೂ ಶಾಲಾ ಶಿಕ್ಷಣಕ್ಕೆ ಬೇಕಾದ ಪ್ರಮುಖ ಉಪಕರಣಗಳನ್ನೂ ಒಳಗೊಂಡಂತೆ ಇತರ ಬಂಡವಾಳ ಸ್ವರೂಪದ ತೊಡಗಿಸುವಿಕೆಗೆ ಮೀಸಲಿರಬೇಕು ಮತ್ತು ಉನ್ನತ ಹಂತದಲ್ಲಿ ಇದು ಶೇಕಡಾ ೨೦-೨೫ರಷ್ಟಿರಬೇಕು ಎಂದು ಶಿಫಾರಸು ಮಾಡುತ್ತದೆ. ಶಾಲಾ ಶಿಕ್ಷಣದ ಒಟ್ಟು ವೆಚ್ಚದ ಕನಿಷ್ಠ ಶೇಕಡಾ ೪ರಷ್ಟನ್ನು ನಿರ್ದೇಶನ ಹಾಗೂ ತಪಾಸಣೆಗೆ ಒದಗಿಸಬೇಕು ಎಂದು ಶಿಫಾರಸು ಮಾಡುತ್ತದೆ.

ಶಿಕ್ಷಕರ ಮೂಲಕ ಸಮಾಜವನ್ನು ಪರಿವರ್ತಿಸುವ ಶೈಕ್ಷಣಿಕ ಸುಧಾರಣೆಯಲ್ಲಿ ಇದು ಶಿಕ್ಷಕರ ಮೇಲೆ ಬಹಳಷ್ಟು ಭರವಸೆಗಳನ್ನು ಇಡುತ್ತದೆ ಮತ್ತು ಶಿಕ್ಷಕರ ಆರ್ಥಿಕ ಸ್ಥಾನಮಾನವನ್ನು ಹೆಚ್ಚಿಸುವ ಅಗತ್ಯದ ಬಗ್ಗೆ ಒತ್ತು ನೀಡುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರ ಭತ್ಯೆಯು ಸಾರ್ವಜನಿಕ ಸಿಬ್ಬಂದಿಗೆ ಸಮನಾಗಿರಬೇಕು, ಮತ್ತು ಅದು ತಲಾ ರಾಷ್ಟ್ರೀಯ ಆದಾಯದ ಮೂರರಿಂದ ನಾಲ್ಕರಷ್ಟಿರಬೇಕು ಎಂದು ಆಯೋಗವು ಭಾವಿಸುತ್ತದೆ. ರಾಷ್ಟ್ರೀಯ ವೇತನ ರಚನೆಯನ್ನು ಅದು ಶಿಫಾರಸು ಮಾಡುತ್ತದೆ. ವಿಶ್ವವಿದ್ಯಾನಿಲಯದ ಶಿಕ್ಷಕರು ಸರ್ಕಾರದಲ್ಲಿರುವ ಹಿರಿಯ ಶ್ರೇಣಿಯ ಐಎಎಸ್ ಅಧಿಕಾರಿಯಷ್ಟೆ ವೇತನವನ್ನು ಪಡೆದುಕೊಳ್ಳಬೇಕು, ಸರ್ಕಾರವು ಇದನ್ನು ಹಲವಾರು ಕಾರಣಗಳಿಗಾಗಿ ಅತ್ಯಂತ ಪ್ರಾಮಾಣಿಕತೆಯಿಂದ ಜಾರಿಗೆ ತಂದಿತು. ಆಯೋಗವು ಹೇಳಿರುವ ಮಟ್ಟಿಗಲ್ಲವಾದರೂ, ಶಿಕ್ಷಕರ ವೇತನವನ್ನು ಹೆಚ್ಚಿಸಲಾಯಿತು.

ಶಿಕ್ಷಕರ ವೇತನಗಳು, ಪುನರಾವರ್ತಿತ "ಶಿಕ್ಷಕೇತರ" ವೇತನಕ್ಕೆ ಸಂಬಂಧಪಟ್ಟವುಗಳ ಮೇಲಿನ ವೆಚ್ಚ, ಮತ್ತು ಕಟ್ಟಡ ನಿರ್ಮಾಣ ಮತ್ತು ಪ್ರಮುಖ ಸಲಕರಣೆಗಳ ಖರೀದಿಗಳನ್ನು ಶಿಕ್ಷಣದ ಮೇಲಿನ ಪ್ರಮುಖ ವೆಚ್ಚಗಳು ಒಳಗೊಂಡಿವೆ. ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಯೋಗವು ಪರಿಗಣಿಸಿದ ಅಂಶವೆಂದರೆ ಶಾಲೆಯು ಮಕ್ಕಳಿಗೆ ಹತ್ತಿರವಿರಬೇಕು ಮತ್ತು ಒಂದು ಮಗುವು ಶಾಲೆಯನ್ನು ತಲಪಲು ಎಷ್ಟು ದೂರ ನಡೆಯಬಹುದು ಎನ್ನುವ ವಿವೇಚನಾಶೀಲ ಮಾನದಂಡವನ್ನು ರೂಪಿಸಿತು. ಶಿಕ್ಷಕೇತರ ವೆಚ್ಚಕ್ಕೆ ಶಿಕ್ಷಕರ ಒಟ್ಟು ವೇತನದ ಶೇಕಡ ೨೦ರಷ್ಟು ಮೊತ್ತವನ್ನು ಹಂಚಿಕೆ ಮಾಡಬೇಕು ಎಂದು ಆಯೋಗವು ಶಿಫಾರಸು ಮಾಡಿತಾದರೂ ಶಾಲೆಯೊಳಗೆ ಇರಬೇಕಾದ ಅಗತ್ಯ ಸಲಕರಣೆಗಳನ್ನು ಕುರಿತು ಅದು ಸಾಕಷ್ಟು ಗಮನವನ್ನು ಹರಿಸಲಿಲ್ಲ.ಶಾಲೆಗಳು ವಿದ್ಯಾರ್ಥಿಗಳನ್ನು ಆಕರ್ಷಿಸಲು

ವಿಫಲವಾದ ಕಾರಣ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿರುವುದನ್ನು ಮಾತ್ರ ಅದು ಗುರುತಿಸಿತು. ಪೋಷಕರ ಬಡತನ ಮಕ್ಕಳು ಶಾಲೆಯಿಂದ ಹೊರಗುಳಿಯಲು ಪ್ರಮುಖ ಕಾರಣ ಎನ್ನುವುದನ್ನು ಅದು ಗುರುತಿಸುತ್ತದೆ. ಹಾಗಾಗಿ ಅದು ಏಕೋಪಾಧ್ಯಾಯ ಶಾಲೆಗಳನ್ನು ಮುಂದುವರಿಸಬೇಕು ಮತ್ತು ಅಂತಹ ಹೊಸ ಶಾಲೆಗಳನ್ನು ಸ್ಥಾಪಿಸಬೇಕು, ಅರೆಕಾಲಿಕ ಪ್ರಾಥಮಿಕ ಶಿಕ್ಷಣ ಮುಂತಾದವನ್ನು ಸ್ಥಾಪಿಸಬೇಕು ಎಂದು ಶಿಫಾರಸು ಮಾಡುತ್ತದೆ ಆದರೆ ಶಾಲೆಯ ವಾತಾವರಣವನ್ನು ಗಮನಾರ್ಹವಾಗಿ ಉತ್ತಮಪಡಿಸುವುದರ ಕಡೆಗೆ ಗಮನ ಹರಿಸುವುದಿಲ್ಲ. ಅದನ್ನು ಗುರುತಿಸುವ ಸಂದರ್ಭದಲ್ಲಿ ಶಾಲೆಗೆ ಅಗತ್ಯವಾದ ಮೂಲಭೂತ ಅನುಕೂಲತೆಗಳನ್ನು ಜಿಲ್ಲಾ ಬೋರ್ಡ್ ಮತ್ತು ನಗರಸಭೆಗಳು ಒದಗಿಸಬೇಕು ಎಂದು ಹೇಳುತ್ತದೆ; ಅಥವಾ ಅದರ ಬಗ್ಗೆ ಹೇಳುವ ಅಗತ್ಯವಿಲ್ಲ ಎನ್ನುವ ಧೋರಣೆಯನ್ನು ಹೊಂದಿರುವಂತಿದೆ. ಅದರ ಪರಿಣಾಮವಾಗಿ ಹಲವು ಏಕೋಪಾಧ್ಯಾಯ ಶಾಲೆಗಳು ಮತ್ತು ಮೂಲಭೂತ ಸೌಕರ್ಯಗಳಿಲ್ಲದ ಶಾಲೆಗಳು ಆಯೋಗದ ಅನಂತರವೂ ಮುಂದುವರಿದುಕೊಂಡು ಬರುತ್ತವೆ. ಪರಿಣಾಮವಾಗಿ ಇವುಗಳ ಮೇಲೆ ಮಾಡಲಾದ ಕೊರತೆಯ ವೆಚ್ಚವು ಹೆಚ್ಚಾಗುತ್ತಾ ಹೋಗುತ್ತದೆ. ಇದು ಮುಂದೆ ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬ರ ಶಿಫಾರಸಿನಂತೆ ದೇಶಾದ್ಯಂತ ಕಪ್ಪು ಹಲಗೆ ಕಾರ್ಯಕ್ರಮವನ್ನು ಬಹಳ ದೊಡ್ಡ ಮಟ್ಟದಲ್ಲಿ ಕಾರ್ಯಾಚರಣೆಗೊಳಿಸುವಂತಾಯಿತು.

ಹಲವಾರು ಸಂಗತಿಗಳಲ್ಲಿ ಆಯೋಗವು ಎರಡು ಸಂಗತಿಗಳ ಬಗ್ಗೆ ಗಮನವನ್ನು ಹರಿಸುತ್ತದೆ, ಮೊದಲನೆಯದು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಎರಡನೆಯದಾಗಿ, ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸುವುದು.

ವಿದ್ಯಾರ್ಥಿ ವೇತನಗಳು

ಆಯೋಗವು ಗಮನ ಹರಿಸಿದ ಸಂಗತಿಗಳಲ್ಲಿ ಅತ್ಯಂತ ಮುಖ್ಯವಾದುದೆಂದರೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ. ಇದನ್ನು ಕೌಶಲ್ಯವನ್ನು ಹುಡುಕುವ ಮತ್ತು ಅದನ್ನು ಪೋಷಿಸುವ ವಿಧಾನವಾಗಿ ಮತ್ತು ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆಯನ್ನು ಸಾಧಿಸುವ ವಿಧಾನವಾಗಿ ಪರಿಚಯಿಸಲಾಗಿದೆ. ಆಯೋಗವು ವಿದ್ಯಾರ್ಥಿವೇತನದ ಕಾರ್ಯಕ್ರಮವನ್ನು ವಿಸ್ತರಿಸುವುದನ್ನು ಪ್ರತಿಪಾದಿಸುತ್ತದೆ, ವಿಶೇಷವಾಗಿ ರಾಷ್ಟ್ರೀಯ ವಿದ್ಯಾರ್ಥಿವೇತನದ ಕಾರ್ಯಕ್ರಮದ ವಿಸ್ತರಣೆ ಮತ್ತು ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿ ವೇತನದ ವಿಸ್ತರಣೆ (ಪು. ೨೦೬-೨೧ ಮತ್ತು ಪು. ೬೧೮-೧೯). ವಿದ್ಯಾರ್ಥಿವೇತನವನ್ನು ಸ್ವೀಕರಿಸುವ ವಿದ್ಯಾರ್ಥಿಗಳ ಶೇಕಡಾವಾರು ಪ್ರಮಾಣದ ನಿಯಮಗಳನ್ನು ಮತ್ತು ಮೊತ್ತವನ್ನು ಆಯೋಗವು ಸ್ಪಷ್ಟವಾಗಿ ಹೇಳುತ್ತದೆ. ಪ್ರಾಥಮಿಕ ಹಂತದಲ್ಲಿ ಶೇಕಡ ೨.೫ (ವರ್ಷಕ್ಕೆ ರೂ. ೬೦ರಂತೆ) ಇರಬೇಕು ಎಂದು ಆಯೋಗವು ಅಭಿಪ್ರಾಯಪಡುತ್ತದೆ. ಎರಡನೆಯ ಹಂತದಲ್ಲಿ ಶೇಕಡ ೫ರಷ್ಟು ವಿದ್ಯಾರ್ಥಿಗಳಿಗೆ ವಿದಾರ್ಥಿ ವೇತನವನ್ನು ನೀಡಬೇಕು (ವಾರ್ಷಿಕ ರೂ. ೧೫೦) ಮತ್ತು ವೃತ್ತಿಪರ ಕೋರ್ಸುಗಳಿಗೆ ಸೇರಿದ ಶೇಕಡ ೩೦ರಷ್ಟು ವಿದ್ಯಾರ್ಥಿಗಳಿಗೆ (ವಾರ್ಷಿಕ ರೂ. ೩೦೦ರಿಂದ ೪೦೦ರಷ್ಟು) ಕೊಡಬೇಕು. ಉನ್ನತ ಶಿಕ್ಷಣದ ಮಟ್ಟದಲ್ಲಿ ಕಲಾ ಮತ್ತು ವಾಣಿಜ್ಯ ಸ್ನಾತಕ ಪದವಿಯಲ್ಲಿರುವ ಶೇಕಡ ೨೫ರಷ್ಟು ವಿದ್ಯಾರ್ಥಿಗಳಿಗೆ (ಮಾಸಿಕ ರೂ ೭೫ ರಷ್ಟು), ವಿಜ್ಞಾನ ಮತ್ತು ವೃತ್ತಿಪರ ಸ್ನಾತಕ ಕೋರ್ಸ್‌ಗಳ ಶೇಕಡ ೫೦ರಷ್ಟು ವಿದ್ಯಾರ್ಥಿಗಳಿಗೆ

(ಮಾಸಿಕ ರೂ ೧೨೫), ಮತ್ತು ಶೇಕಡ ೫೦ ರಷ್ಟು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ (ಮಾಸಿಕ ರೂ ೩೦೦ರಷ್ಟು) ವಿದ್ಯಾರ್ಥಿ ವೇತನಗಳನ್ನು ಕೊಡಬೇಕು ಎಂದು ಆಯೋಗವು ಶಿಫಾರಸ್ಸು ಮಾಡುತ್ತದೆ. ಇದಲ್ಲದೆ ರಾಷ್ಟ್ರೀಯ (ಅರ್ಹತಾ) ವಿದ್ಯಾರ್ಥಿ ವೇತನವನ್ನು ಶೇಕಡ ಹತ್ತರಷ್ಟು ವಿದ್ಯಾರ್ಥಿಗಳಿಗೆ ಹೆಚ್ಚಿಸಬೇಕು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿ ವೇತನಕ್ಕೆ ವ್ಯಾಪಕವಾಗಿ ಪ್ರಚಾರ ನೀಡಬೇಕು ಎಂದು ಆಯೋಗವು ಶಿಫಾರಸು ಮಾಡುತ್ತದೆ.

ಹಣದ ಮೌಲ್ಯವು ಬದಲಾದಂತೆ ಮೊತ್ತವು ಬದಲಾಗಬೇಕಾಗುತ್ತಾದರೂ ಆಯೋಗವು ಸೂಚಿಸಿದ ವಿದ್ಯಾರ್ಥಿ ವೇತನಗಳನ್ನು ಸ್ವೀಕರಿಸುವ ವಿದ್ಯಾರ್ಥಿಗಳ ಪ್ರಮಾಣ ಇಂದಿಗೂ ಸಂಗತವಾಗಿದೆ. ಸದ್ಯದಲ್ಲಿ ವಿದಾರ್ಥಿಗಳಲ್ಲಿ ಕೇವಲ ಕೆಲವೇ ಕೆಲವರು ವಿದ್ಯಾರ್ಥಿ ವೇತನವನ್ನು ಪಡೆಯುತ್ತಿದ್ದಾರೆ. ಆಯೋಗವು ಯೋಚಿಸಿದಂತೆ ವಿದ್ಯಾರ್ಥಿವೇತನದ ಉದ್ದೇಶ ಪ್ರತಿಭೆಯನ್ನು ಹುಡುಕುವುದು ಮತ್ತು ಪೋಷಿಸುವುದು ಮತ್ತು ವ್ಯವಸ್ಥೆಯಲ್ಲಿ ಸಮಾನ ಅವಕಾಶಗಳನ್ನು ಸೃಷ್ಟಿಸುವುದಾಗಿದೆ. ಇವೆರಡರ ದೃಷ್ಟಿಯಿಂದಲೂ ಈಗಿನ ವಿದ್ಯಾರ್ಥಿ ವೇತನದ ಕಾರ್ಯಕ್ರಮವನ್ನು ವಿಸ್ತರಿಸುವ ಅಗತ್ಯವಿದೆ.

ಉನ್ನತ ಶಿಕ್ಷಣದಲ್ಲಿ ನೇರವಾಗಿ ಕೊಡುವ ವಿದ್ಯಾರ್ಥಿ ವೇತನಕ್ಕೆ ಹೋಲಿಸಿದರೆ ಆಯೋಗವು ಸಾಲ ವಿದ್ಯಾರ್ಥಿವೇತನದಲ್ಲಿ ಯಾವುದೇ ಲಾಭವನ್ನು ಕಂಡುಕೊಳ್ಳದಿದ್ದರೂ ಕೂಡ ರಾಷ್ಟ್ರೀಯ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿವೇತನಕ್ಕೆ ಪೂರಕವಾಗಿ ಸಾಲ ವಿದ್ಯಾರ್ಥಿವೇತನವನ್ನು ಉದಾರವಾಗಿ ನೀಡಬೇಕೆಂದು ಶಿಫಾರಸು ಮಾಡುತ್ತದೆ (ಪು. ೨೧೮). "ಪ್ರತ್ಯೇಕವಾದ ಸಾಲ ವಿದ್ಯಾರ್ಥಿವೇತನವು ಸಮಾನತೆಯದಾಗಿಲ್ಲದಿರುವುದರಿಂದ" ನೇರವಾಗಿ ಕೊಡುವ ವಿದ್ಯಾರ್ಥಿ ವೇತನವನ್ನು ಬೃಹತ್ತಾಗಿ ವಿಸ್ತರಿಸಿದ ಅನಂತರ ಅದಕ್ಕೆ ಪೂರಕವಾಗಿ ಸಾಲ ವಿದ್ಯಾರ್ಥಿ ವೇತನವನ್ನು ಆಯೋಗವು ಶಿಫಾರಸ್ಸು ಮಾಡುತ್ತದೆ ಎನ್ನುವುದನ್ನು ನಾವು ಗಮನಿಸಬೇಕು. ಸೂಚಿಸಿದ ರೀತಿಯಲ್ಲೇ ನಂತರದ ವರ್ಷಗಳಲ್ಲಿ ರಾಷ್ಟ್ರೀಯ ವಿದ್ಯಾರ್ಥಿವೇತನವನ್ನು ಪ್ರಾರಂಭಿಸಲಾಯಿತು. ಮರುಪಾವತಿಯಲ್ಲಿ ಸಾಲ ವಿದ್ಯಾರ್ಥಿವೇತನವು ಸೃಷ್ಟಿಸಬಹುದಾದ ಸಮಸ್ಯೆಗಳ ಬಗ್ಗೆ ಮತ್ತು ವಿದ್ಯಾರ್ಥಿಗಳು ಎದುರಿಸಬಹುದಾದ ಸಂಕಷ್ಟಗಳ ಬಗ್ಗೆ ಆಯೋಗಕ್ಕೆ ಅರಿವಿತ್ತು. ಮರುಭರಿಕೆ ಮಾಡಿಕೊಳ್ಳುವ ಸಮಸ್ಯೆಯು ಎಷ್ಟೊಂದು ತೀವ್ರಸ್ವರೂಪದ್ದು ಎನ್ನುವುದು ಅನಂತರ ತಿಳಿದು ಬಂದು ಅದನ್ನು ೧೯೮೦ರ ಕೊನೆಯ ಹೊತ್ತಿಗೆ ಕೈಬಿಡಲಾಯಿತು ಮತ್ತು ಅದರ ಸ್ಥಾನದಲ್ಲಿ ವಾಣಿಜ್ಯ ಬ್ಯಾಂಕುಗಳು ೧೯೯೦ರಲ್ಲಿ ಸಾಧಾರಣವಾದ ವಿದ್ಯಾರ್ಥಿ ಸಾಲದ ಕಾರ್ಯಕ್ರಮವನ್ನು ಪ್ರಾರಂಬಿಸಿದವು.

ಉನ್ನತ ಶಿಕ್ಷಣ ಮತ್ತು ಸಂಶೋಧನೆ

ಉನ್ನತ ಶಿಕ್ಷಣ ಮತ್ತು ಸಂಶೋಧನೆಯು ಆರ್ಥಿಕ ಬೆಳವಣಿಗೆಗೆ ಕೊಡುಗೆಯನ್ನು ಸಲ್ಲಿಸುವುದಲ್ಲದೆ ಭಾರತ ಮತ್ತು ಇತರ ಶ್ರೀಮಂತ ದೇಶಗಳ ನಡುವಿನ ಕಂದರವನ್ನು ಮುಚ್ಚುತ್ತದೆ ಎಂದು ಬಲವಾಗಿ ನಂಬಿದ ಆಯೋಗವು ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ವಿಶೇಷವಾದ ಒತ್ತನ್ನು ನೀಡಿತು. ನಿರ್ದಿಷ್ಟವಾಗಿ ಅದು ಉನ್ನತ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಗುಣಮಟ್ಟವನ್ನು ಮತ್ತು ತಜ್ಞತೆಯನ್ನು ಉತ್ತೇಜಿಸಲು ಕೆಲವು ಕಾರ್ಯಕ್ರಮಗಳಿಗಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ದೊಡ್ಡ ಮೊತ್ತದ ಹಂಚಿಕೆಯನ್ನು ಸೂಚಿಸಿತು. ಉದಾಹರಣೆಗೆ, ವಿಶ್ವವಿದ್ಯಾಲಯಗಳಲ್ಲಿ ಹೊಸ

ಕೇಂದ್ರಗಳನ್ನು/ಸ್ಕೂಲ್‌ಗಳನ್ನು ಸೃಷ್ಟಿಸಿ ನಿರ್ದಿಷ್ಟ ಚಟುವಟಿಕೆಗಳಿಗೆ ಹೆಚ್ಚುವರಿ ಧನಸಹಾಯವನ್ನು ಕೊಡುವಂತೆ ಶಿಫಾರಸು ಮಾಡಿತು. ಅದರ ಗಮನವನ್ನು ಸೆಳೆದ ಪ್ರಮುಖ ಚಟುವಟಿಕೆಗಳೆಂದರೆ: (ಅ) ಮುಂದುವರಿದ ಅಧ್ಯಯನ ಕೇಂದ್ರಗಳು ಮತ್ತುಪ್ರಮುಖ ವಿಶ್ವವಿದ್ಯಾಲಯಗಳ ಸೃಷ್ಟಿ; (ಆ) ಕೆಲವು ಆಯ್ದ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಸ್ಕೂಲ್‌ಗಳನ್ನು ಸೃಷ್ಟಿಸುವುದು; (ಇ) ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಯನ್ನು ಉತ್ತೇಜಿಸುವುದು; (ಈ) ಕೇಂದ್ರೀಯ ಪರೀಕ್ಷಾ ಸಂಘಟನೆಗಳನ್ನು ಸ್ಥಾಪಿಸುವುದು; (ಉ) ಆಧುನಿಕ ಭಾರತೀಯ ಭಾಷೆಗಳ ಸಾಹಿತ್ಯವನ್ನು ಅಭಿವೃದ್ಧಿಪಡಿಸುವುದು; (ಊ) ಕೃಷಿ, ತಾಂತ್ರಿಕ, ಮತ್ತು ವೈದ್ಯಕೀಯ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದು; (ಋ) ಶಿಕ್ಷಣದ ಎಲ್ಲ ವಲಯಗಳಲ್ಲೂ ಶೈಕ್ಷಣಿಕ ಸಂಶೋಧನೆಯನ್ನು ಅಭಿವೃದ್ಧಿಪಡಿಸುವುದು. ವಿಶ್ವವಿದ್ಯಾಲಯಗಳಿಗೆ ಅಭಿವೃದ್ಧಿ ಧನಸಹಾಯದ ಜವಾಬ್ದಾರಿಯನ್ನು ಯು.ಜಿ.ಸಿ. ಮತ್ತು ರಾಜ್ಯ ಸರ್ಕಾರಗಳು ಹಂಚಿಕೊಳ್ಳಬೇಕು ಎಂದೂ ಸಹ ಆಯೋಗವು ಶಿಫಾರಸು ಮಾಡುತ್ತದೆ.

ಮಾಡಬೇಕಾದುದು ಇನ್ನೂ ಸಾಕಷ್ಟಿದೆಯಾದರೂ ಈ ಶಿಫಾರಸುಗಳಲ್ಲಿ ಕೆಲವನ್ನು ಅನುಸರಿಸಲಾಯಿತು. ರಾಜ್ಯ ವಿಶ್ವವಿದ್ಯಾಲಯಗಳಿಗೆ ಯು.ಜಿ.ಸಿ.ಯು ನಿರ್ವಹಣಾ ಅನುದಾನವನ್ನು ನೀಡಬೇಕು ಮತ್ತು ಯು.ಜಿ.ಸಿ. ಹಾಗೂ ರಾಜ್ಯಸರಕಾರಗಳು ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಅನುದಾನ ನೀಡಬೇಕು ಎನ್ನುವ ಆಯೋಗದ ಶಿಫಾರಸನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಯು.ಜಿ.ಸಿ.ಯು ರಾಜ್ಯ ವಿಶ್ವವಿದ್ಯಾಲಯಗಳಿಗೆ ಅಭಿವೃದ್ಧಿ ಅನುದಾನವನ್ನು ಮುಂದುವರಿಸುತ್ತಿದೆ ಮತ್ತು ರಾಜ್ಯಸರ್ಕಾರಗಳು ತಮ್ಮ ಅನುದಾನವನ್ನು ಕೇವಲ ನಿರ್ವಹಣಾ ಉದ್ದೇಶಗಳಿಗೆ ಮಾತ್ರ ಸೀಮಿತಗೊಳಿಸಿವೆ.

ರಾಜ್ಯದ ಪಾತ್ರ ಮತ್ತು ನಿಧಿಯ ಇತರ ಮೂಲಗಳು

ಶಿಕ್ಷಣಕ್ಕೆ ಬೇಕಾದ ಬಹಳಷ್ಟು ಬೆಂಬಲವು ಸರ್ಕಾರದ ನಿಧಿಯಿಂದ ಬರಬೇಕೆ ಹೊರತು ಖಾಸಗಿ ವಲಯದಿಂದಲ್ಲ ಎನ್ನುವ ವಿಷಯದಲ್ಲಿ ಆಯೋಗವು ಅತ್ಯಂತ ಸ್ಪಷ್ಟವಾಗಿತ್ತು (ಪು. ೮೭೦). ಶುಲ್ಕದಲ್ಲಿ ದೊಡ್ಡ ಮಟ್ಟದ ಇಳಿಕೆಯಾಗುತ್ತದೆ ಎಂದು ಅದು ಸರಿಯಾಗಿಯೆ ಮುನ್ಸೂಚನೆಯನ್ನು ನೀಡಿತ್ತು. ಹಾಗಾಗುವುದು ಸಹಜವೇ ಆಗಿತ್ತು. ಏಕೆಂದರೆ, ಹತ್ತನೆಯ ತರಗತಿಯವರೆಗೆ ಮುಕ್ತ ಹಾಗೂ ಕಡ್ಡಾಯ ಶಿಕ್ಷಣವನ್ನು ಕೊಡಬೇಕು ಮತ್ತು ದ್ವಿತೀಯ ಹಂತ ಮತ್ತು ಉನ್ನತ ಹಂತದ ಶಿಕ್ಷಣದಲ್ಲಿ ಮುಕ್ತವಾದ ಪ್ರವೇಶಾವಕಾಶವಿರಬೇಕು, ಮತ್ತು ಶಿಕ್ಷಣದ ಎಲ್ಲ ಹಂತಗಳಿಗೂ ವಿದ್ಯಾರ್ಥಿವೇತನವನ್ನು ವಿಸ್ತರಿಸಬೇಕು ಎಂದು ಅದು ಶಿಫಾರಸು ಮಾಡಿತ್ತು. ಸ್ಥಳೀಯ ಸಂಸ್ಥೆಗಳು ಅವು ಎಷ್ಟೆ ಪಯತ್ನಿಸಿದರೂ ಕೂಡ ಹೆಚ್ಚಿನ ಮಟ್ಟದ ಸಹಾಯವನ್ನು ಅವು ಒದಗಿಸಲಾಗುವುದಿಲ್ಲ ಹಾಗಾಗಿ ಇತರ ಮೂಲಗಳ ಆದಾಯ (ಕೊಡುಗೆಗಳು ಇತ್ಯಾದಿ) ಅಷ್ಟೇನು ಹೆಚ್ಚಾಗುವುದಿಲ್ಲ ಎನ್ನುವ ಮುನ್ಸೂಚನೆಯನ್ನು ಅದು ನೀಡಿತ್ತು. ಪರಿಣಾಮವಾಗಿ, “ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣದ ಒಟ್ಟು ವೆಚ್ಚದ ಶೇಕಡ ೯೦ರಷ್ಟನ್ನು ಭರಿಸಬೇಕಾಗುತ್ತದೆ”(ಪು.೮೭೦).

ಕಾಲಕ್ರಮೇಣ ಶುಲ್ಕ ಹಾಗೂ ಇತರ ಮೂಲಗಳ ಪಾಲು ಕಡಮೆಯಾಗುತ್ತಿರುವುದನ್ನು ಗಮನಿಸಿದಾಗ ಆಯೋಗದ ಮುನ್ಸೂಚನೆಗಳು ನಿಜವಾಗುತ್ತಿರುವುದನ್ನು ಗಮನಿಸಬಹುದು. ಶಿಕ್ಷಣದ ಮೇಲಿನ ಒಟ್ಟು ವೆಚ್ಚದಲ್ಲಿ ಶುಲ್ಕ, ಸ್ಥಳೀಯ ಸಂಸ್ಥೆಗಳ ಮತ್ತು ಇತರ ಮೂಲಗಳ

ಸಾಪೇಕ್ಷ ಪಾಲು ಕಡಮೆಯಾಗುತ್ತಿದೆ. ಆದರೆ ಆಯೋಗವು ಶಿಫಾರಸು ಮಾಡಿದ ರೀತಿಯಲ್ಲಿ ಸರ್ಕಾರದ ಪಾಲು ಶೇಕಡ ೯೦ನ್ನು ಮುಟ್ಟಿಲ್ಲ. ಶಾಲಾ ಶಿಕ್ಷಣದಲ್ಲಿ ಸರ್ಕಾರದ ಪಾಲು ಶೇಕಡ ತೊಂಬತ್ತು ಅಥವಾ ಅದಕ್ಕಿಂತಲೂ ಹೆಚ್ಚಿದ್ದರೆ ಚಿತ್ರ ೪ ರಲ್ಲಿ ತೋರಿಸಿರುವಂತೆ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದು ಕಂಡುಬರುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಧೋರಣೆಯು ಮತ್ತಷ್ಟು ಆತಂಕ ಹುಟ್ಟಿಸುವಂತಿದೆ, ಸರ್ಕಾರದ ಪಾಲು ಸಾಪೇಕ್ಷವಾಗಿ ಕಡಮೆಯಾಗುತ್ತಿರುವುದು ಮತ್ತು ವಿದ್ಯಾರ್ಥಿ ಶುಲ್ಕದಲ್ಲಿ, ವಿಶೇಷವಾಗಿ ಉನ್ನತ ಶಿಕ್ಷಣದಲ್ಲಿ, ವಿಪರೀತ ಏರಿಕೆಯಾಗುತ್ತಿರುವಂತೆ ಕಾಣಿಸುತ್ತಿದೆ (ತಿಲಕ್ ಮತ್ತು ರಾಣಿ ೨೦೦೩).

ಆಯೋಗವು ಮತ್ತಷ್ಟು ಮುಂದುವರಿದು ಕೇಂದ್ರ ಸರ್ಕಾರವು ಮತ್ತಷ್ಟು ದೊಡ್ಡ ಪಾತ್ರವನ್ನು ವಹಿಸಬೇಕೆಂದು ಮನವಿ ಮಾಡುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸೇರಿ ಶೇಕಡ ೯೦ ರಷ್ಟು ಶಿಕ್ಷಣದ ವೆಚ್ಚವನ್ನು ಭರಿಸಬೇಕು ಎಂದು ಹೇಳುವ ಆಯೋಗವು ಕೇಂದ್ರ ಸರಕಾರವು ಪ್ರಮುಖವಾದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು ಮತ್ತು ರಾಜ್ಯಗಳು "ಉಳಿದ ಜವಾಬ್ದಾರಿಗಳನ್ನು ನಿರ್ವಹಿಸಬೇಕು" ಎಂದು ಅಭಿಪ್ರಾಯಪಡುತ್ತದೆ (ಪು.೯೦೪). ಪ್ರಾಥಮಿಕ ಶಿಕ್ಷಣವು ರಾಜ್ಯಪಟ್ಟಿಯಲ್ಲಿದ್ದರೂ ಕೂಡ ಪ್ರಾಥಮಿಕ ಶಿಕ್ಷಣಕ್ಕೆ ನಿಧಿಯನ್ನು ಕ್ರೋಡೀಕರಿಸಲು ಕೇಂದ್ರ ಸರಕಾರವು ದೊಡ್ಡ ಪಾತ್ರವನ್ನು ವಹಿಸಬೇಕೆಂದು ಆಯೋಗವು ಬಯಸುತ್ತದೆ. ನಾಯಕ್ ಅವರು (೧೯೭೫ ಪು, ೯೨) ಪುನರುಚ್ಚರಿಸಿದಂತೆ ವರದಿಯಿಂದ ಸ್ಫೂರ್ತಿ ಪಡೆದು ಹೇಳುವುದಾದರೆ "ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಯಾವುದೇ ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಸಮಾನವಾದ ಆಧಾರದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಕೇಂದ್ರದ ನಿಧಿಯನ್ನು ಗೊತ್ತುಪಡಿಸುವುದು ಅಗತ್ಯವಾಗಿದೆ. "ಆಯೋಗವು ದೊಡ್ಡ ಜವಾಬ್ದಾರಿಯನ್ನು ಕೇಂದ್ರ ಸರಕಾರವು ತೆಗೆದುಕೊಳ್ಳಬೇಕು ಎಂದು ಹೇಳಿತಾದರೂ ಅದು ಶಿಕ್ಷಣದಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳಿಗೆ ಸಂವಿಧಾನದತ್ತವಾಗಿರುವ ಸ್ಥಾನವನ್ನು ಬದಲಾಯಿಸಲು ಆಯೋಗವು ಬಯಸಲಿಲ್ಲ. ಸಂವಿಧಾನದಲ್ಲಿರುವಂತೆ ಶಿಕ್ಷಣವು ರಾಜ್ಯ ಪಟ್ಟಿಯಲ್ಲೆ ಇರಬೇಕು ಎನ್ನುವುದು ಆಯೋಗದ ಸ್ಪಷ್ಟ ನಿಲುವಾಗಿತ್ತು. ಆದರೆ ಆಯೋಗದ ಪ್ರಕಾರ ಈಗಿರುವ ವ್ಯವಸ್ಥೆಯಲ್ಲೇ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಪರಸ್ಪರ ಸಹಯೋಗದೊಂದಿಗೆ ಕೆಲಸ ಮಾಡಲು ಸಾಕಷ್ಟು ಅವಕಾಶವಿದ್ದರೂ ಅದನ್ನು ಸಂಪೂರ್ಣವಾಗಿ ಬಳಸಿಕೊಂಡಿಲ್ಲ (ಪು.೮೩೦). ಈ ಮೊದಲೇ ಉಲ್ಲೇಖಿಸಿರುವಂತೆ ಆಯೋಗವು ಶಿಕ್ಷಣದ ವಿವಿಧ ಹಂತಗಳನ್ನು ವಿವಿಧ ವಿಭಾಗಗಳಾಗಿ ವಿಂಗಡಿಸದೆ ಶಿಕ್ಷಣದ ಎಲ್ಲ ಅಂಶಗಳನ್ನೂ ಸಮಗ್ರವಾಗಿ ನೋಡುವ ದೃಷ್ಟಿಕೋನವನ್ನು ಹೊಂದಿತ್ತು. ಶಿಕ್ಷಣಕ್ಕೆ ಸಂಬಂಧಿಸಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಸಂಬಂಧವನ್ನು ಹೇಳುವಾಗ ಆಯೋಗವು ಇದನ್ನು ಸ್ಪಷ್ಟಪಡಿಸುತ್ತದೆ, "ಶಿಕ್ಷಣವನ್ನು ಬಿಡಿಬಿಡಿಯಾಗಿ, ಅಂದರೆ ಒಂದನ್ನು ರಾಜ್ಯ ಪಟ್ಟಿಯಲ್ಲಿ ಮತ್ತೊಂದನ್ನು ಸಮವರ್ತಿ ಪಟ್ಟಿಯಲ್ಲಿಟ್ಟು ನೋಡಲು ನಾವು ಬಯಸುವುದಿಲ್ಲ; ಯಾವುದೇ ಸಂದರ್ಭದಲ್ಲಾದರೂ ಶಿಕ್ಷಣವನ್ನು ಸಮಗ್ರವಾಗಿ ಪರಿಗಣಿಸಬೇಕು" (ಪು.೮೨೯).

ಆಯೋಗವು ಸೂಚಿಸಿದ್ದಕ್ಕೆ ತದ್ವಿರುದ್ಧವಾಗಿ ೧೯೭೬ರಲ್ಲಿ ಸಂವಿಧಾನದ ೪೨ನೆಯ ತಿದ್ದುಪಡಿಯಲ್ಲಿ ಶಿಕ್ಷಣವನ್ನು ಸಮವರ್ತಿ ಪಟ್ಟಿಯ ವಿಷಯವನ್ನಾಗಿ ಮಾಡಲಾಯಿತು. ಆದರೆ ಅದರ ಅನಂತರದ ವರ್ಷಗಳಲ್ಲಿ ಶಿಕ್ಷಣಕ್ಕೆ ಧನಸಹಾಯವನ್ನು ಒದಗಿಸುವಲ್ಲಿ ಕೇಂದ್ರ ಸರ್ಕಾರವು ಯಾವುದೇ ಬಗೆಯ ಮಹತ್ತ್ವದ ಪಾತ್ರವನ್ನು ವಹಿಸಿದಂತೆ ಕಂಡುಬರುವುದಿಲ್ಲ

(ತಿಲಕ್ ೧೯೮೯). ೧೯೮೬ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಕಟಿಸಿದ ಅನಂತರವಷ್ಟೆ ಪ್ರಾಥಮಿಕ ಶಿಕ್ಷಣಕ್ಕೆ ಧನಸಹಾಯವನ್ನು ಒದಗಿಸುವಲ್ಲಿ ಕೇಂದ್ರ ಸರಕಾರವು ಹೆಚ್ಚು ಪಾತ್ರವನ್ನು ವಹಿಸಲು ತೊಡಗಿತು, ಮತ್ತು ಸಂವಿಧಾನದಲ್ಲಿರುವ ಅವಕಾಶಗಳಿಗೆ ವಿರುದ್ಧವಾಗಿ ಸಾಪೇಕ್ಷವಾಗಿ ಉನ್ನತ ಶಿಕ್ಷಣದ ನೀತಿ ನಿರೂಪಣೆ, ಯೋಜನೆ ಹಾಗೂ ಧನಸಹಾಯಕ್ಕೆ ಸಂಬಂಧಿಸಿದಂತೆಕೇಂದ್ರಸರಕಾರದಪಾತ್ರವುಕ್ಷೀಣಿಸುತ್ತಾಬಂದಿತು! (ತಿಲಕ್ ೨೦೦೪).

ಕೇಂದ್ರ ಪ್ರಾಯೋಜಿತ ವಲಯ

ಆಯೋಗದ ಪ್ರಕಾರ ಕೇಂದ್ರ ಹಾಗೂ ಕೇಂದ್ರ ಪ್ರಾಯೋಜಿತ ವಲಯಗಳ ವಿಸ್ತರಣೆಯಲ್ಲಿ ಕೇಂದ್ರ ಸರ್ಕಾರವು ಹೆಚ್ಚಿನ ಜವಾಬ್ದಾರಿಯನ್ನು ವಹಿಸಬೇಕು (ಪು. ೮೯೪-೯೫). ಕೇಂದ್ರ ಅಥವಾ ಕೇಂದ್ರ ಪ್ರಾಯೋಜಿತ ವಲಯಗಳ ಯಾವುದೇ ಕಾರ್ಯಕ್ರಮಗಳನ್ನು ಒಳಗೊಳ್ಳಲು ಅದು ಅತ್ಯಂತ ಮಹತ್ತ್ವದ್ದಾಗಿರಬೇಕು ಮತ್ತು ರಾಷ್ಟ್ರೀಯ ಸ್ವರೂಪದ್ದಾಗಿರಬೇಕು. ದೇಶಾದ್ಯಂತ ಸಾಮಾನ್ಯ ನೀತಿಯಾಗಿ ಅಳವಡಿಸಿಕೊಳ್ಳಬೇಕಾದ ಕಾರ್ಯಕ್ರಮಕ್ಕೆ ಕೇಂದ್ರ ಪ್ರಾಯೋಜಿತ ವಲಯದಲ್ಲಿ ಆದ್ಯತೆಯನ್ನು ಕೊಡಬೇಕು. ಕೇಂದ್ರ ಪಾಯೋಜಿತ ವಲಯಗಳಿಗೆ ಲಭ್ಯವಿರುವ ನಿಧಿಯನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬೇಕೆಂದು ಆಯೋಗವು ಪ್ರತಿಪಾದಿಸುತ್ತದೆ: ಅದರಲ್ಲಿ ಅರ್ಧದಷ್ಟನ್ನು ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಮತ್ತು ಉಳಿದ ಅರ್ಧದಷ್ಟನ್ನು, ಕೆಲವು ತರದ ಸಮಾನತೆಯ ತತ್ತ್ವಗಳ ಆಧಾರದ ಮೇಲೆ, ರಾಜ್ಯಗಳಿಗೆ ಲಭ್ಯವಾಗುವಂತೆ ಮಾಡಬೇಕು. ರಾಜ್ಯಗಳು ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಅದನ್ನು ಸ್ಥಳೀಯ ಪರಿಸ್ಥಿತಿಗೆ ಸೂಕ್ತವಾಗುವ ರೀತಿಯಲ್ಲಿ ಯಾವುದೇ ತುರ್ತಾದ ಮತ್ತು ಮಹತ್ತ್ವವಾದ ಯೋಜನೆಗೆ ಉಪಯೋಗಿಸಿಕೊಳ್ಳಲು ಮುಕ್ತ ಅವಕಾಶವಿರಬೇಕು. ಆಯೋಗವು ಮತ್ತೊಂದು ಪ್ರಮುಖ ಶಿಫಾರಸನ್ನು ಮಾಡಿತು: ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಸಿಗುವ ಕೇಂದ್ರದ ಸಹಾಯವು ಮರುಕಳಿಸುವಂತಿರಬಾರದು ಮತ್ತು ಅದನ್ನು ಯೋಜನೆಯ ಅವಧಿಗೆ ಸೀಮಿತಗೊಳಿಸುವುದರ ಬದಲು ಕೇಂದ್ರ ಪ್ರಾಯೋಜಿತ ಯೋಜನೆಗಳ ಮಹತ್ತ್ವದ ಯೋಜನೆಗಳಿಗೆ ಐದು ವರ್ಷದ ಅವಧಿಗೆ ಕೊಡಬೇಕು. ಸಹಾಯವನ್ನು ಇನ್ನೂ ದೀರ್ಘಾವಧಿಗೆ ವಿಸ್ತರಿಸಬಹುದು, ೧೦ ವರ್ಷಗಳವರೆಗೂ ಕೂಡ.

ಸ್ಥಳೀಯ ಸಂಸ್ಥೆಗಳಿಗೆ ಸಹಾಯಾನುದಾನ

ವರದಿಯ ಪೂರಕ ಟಿಪ್ಪಣಿಯಲ್ಲಿ ಆಯೋಗವು ಶಿಕ್ಷಣಕ್ಕೆ ಸ್ಥಳೀಯ ಕೊಡುಗೆಯನ್ನು ಉತ್ತೇಜಿಸುವ ರೀತಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ – ಜಿಲ್ಲಾ ಮಟ್ಟದ ಸಂಸ್ಥೆಗಳು ಮತ್ತು ನಗರಸಭೆಗಳು - ಸಹಾಯಾನುದಾನವನ್ನು ನೀಡುವ ವಿವರಗಳನ್ನು ಸೂಚಿಸುತ್ತದೆ (೯೦೨-೦೯). "ಶಾಲೆಗಳ ಭೌತಿಕ ಅನುಕೂಲತೆಗಳನ್ನು ಉತ್ತಮಪಡಿಸಲು ಸ್ಥಳೀಯ ಸಮುದಾಯಗಳ ಸಹಾಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು" ಎಂದು ಆಯೋಗವು ಶಿಫಾರಸ್ಸು ಮಾಡುತ್ತದೆ (ಪು.೮೭೨). ರಾಜ್ಯ ಸರಕಾರಗಳು ಶೇಕಡ ೧೦೦ರಷ್ಟು ಶಿಕ್ಷಕ ಅನುದಾನ ಮತ್ತು ಶಿಕ್ಷಕೇತರ ವೆಚ್ಚಗಳನ್ನು ಭರಿಸಲು ಪ್ರತಿ ಮಗುವಿಗೂ ನಿರ್ಬಂಧಿತ ಅನುದಾನ, ಮತ್ತು ಮರುಕಳಿಸದ ವೆಚ್ಚಕ್ಕೆ ಪ್ರತ್ಯೇಕವಾದ ಅನುದಾನವನ್ನು ನೀಡಬೇಕು. ಸ್ಥಳೀಯ ಸಂಸ್ಥೆಗಳು ಎಷ್ಟೇ ಪ್ರಯತ್ನಪಟ್ಟರೂ ಅತ್ಯಂತ ಸಣ್ಣ ಮೊತ್ತಕ್ಕಿಂತ ಹೆಚ್ಚಿನದನ್ನು

ಸಂಗ್ರಹಿಸಲು ಸಾಧ್ಯವಿಲ್ಲ ಎನ್ನುವುದು ಆಯೋಗಕ್ಕೆ ತಿಳಿದಿತ್ತು. ಪ್ರತಿ ವಿದ್ಯಾರ್ಥಿಯ ವೆಚ್ಚದಲ್ಲಿ ಸಮಾನತೆಯನ್ನು ಸಾಧಿಸುವುದು ಮತ್ತು ಆ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಸಮಾನಗೊಳಿಸಬೇಕು ಎನ್ನುವುದು ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಕೊಡುವುದರ ಹಿಂದಿನ ಉದ್ದೇಶವಾಗಿತ್ತು. ಕೆಲವು ಎಲ್ಲ ಶಾಲೆಗಳಲ್ಲೂ ಸಹ ಒಂದು ಕನಿಷ್ಠಮಟ್ಟದ ಕಾರ್ಯನಿರ್ವಹಣೆಯು ಸಾಧ್ಯವಾಗುವಂತೆ ಸಮಾನತೆಯ ತತ್ತ್ವದ ಆಧಾರದ ಮೇಲೆ ಪ್ರತಿಯೊಂದೂ ಶಾಲೆಯೂ ನಿರ್ವಹಣಾ ಅನುದಾನವನ್ನು ಪಡೆಯಬೇಕು (ಶಾಲೆಗಳನ್ನು ಸರಿಯಾಗಿ ನಿರ್ವಹಿಸದಿದ್ದರೆ ಅದನ್ನು ಕಡಿತ ಮಾಡುವ ನಿರ್ಬಂಧಕ್ಕೊಳಪಟ್ಟು) ಮತ್ತು ಚೆನ್ನಾಗಿ ನಿರ್ವಹಣೆ ಮಾಡಲ್ಪಟ್ಟ ಶಾಲೆಗಳಿಗೆ ಹೆಚ್ಚಿನ 'ಜಾಮ್' ಅನುದಾನ ಸಿಗಬೇಕು (ನಾಯಕ್ ೧೯೭೮: ೧೪೩).

ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರಗಳಿಂದ ಸಿಗುತ್ತಿರುವ ಅನುದಾನವು ಸ್ಥಳೀಯ ಸಂಸ್ಥೆಗಳು ಸಂಪನ್ಮೂಲಗಳನ್ನು ಸಂಗ್ರಹಿಸಲು ಯಾವುದೇ ರೀತಿಯ ಉತ್ತೇಜಕ ಪಾತ್ರವನ್ನು ವಹಿಸುತ್ತಿಲ್ಲ ಎನ್ನುವುದು ಅನುಭವದಿಂದ ತಿಳಿದು ಬಂದಿದೆ. ಸ್ಥಳೀಯ ಸಂಸ್ಥೆಗಳು, ಅವುಗಳಿಗಿರುವ ಮಿತವಾದ ಸಂಪನ್ಮೂಲಗಳ ಆಧಾರ ಮತ್ತು ವಿವಿಧ ವಲಯಗಳ ಸ್ಪರ್ಧಾತ್ಮಕ ಅಗತ್ಯಗಳ ಸನ್ನಿವೇಶದಲ್ಲಿ, ಸ್ವತಃ ಯಾವುದೇ ರೀತಿಯ ಮಹತ್ತ್ವದ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಧ್ಯವಿಲ್ಲ ಎನ್ನುವ ಆಯೋಗದ ಮಾತು ನಿಜವಾಗಿದೆ. ಮೂರನೆಯದಾಗಿ, ಸಾಮಾನ್ಯವಾಗಿ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಮತ್ತು ತಲಾ ಅಥವಾ ಪ್ರತಿ ವಿದ್ಯಾರ್ಥಿಗೆ ತಗಲುವ ವೆಚ್ಚದಲ್ಲಿ ಜಿಲ್ಲೆಗಳ ಮತ್ತು ವಿಭಾಗಗಳ ನಡುವೆ ವ್ಯಾಪಕವಾದ ಏಳುಬೀಳುಗಳಿವೆ.

ಶುಲ್ಕಗಳು ಮತ್ತು ವೆಚ್ಚದ ಮರುಭರಿಕೆ

ಶಿಕ್ಷಣದಲ್ಲಿ ಶುಲ್ಕದ ಪಾತ್ರ ಮತ್ತು ಅದರ ತೊಡಕಿನ ಬಗ್ಗೆ ಆಯೋಗಕ್ಕೆ ಸ್ಪಷ್ಟವಾದ ಮತ್ತು ಪ್ರಗತಿಪರವಾದ ನಿಲುವುಗಳಿದ್ದವು, ಅದು ಹೇಳುವಂತೆ, "ಅದನ್ನು (ಶುಲ್ಕವನ್ನು) ಆದಾಯದ ಮೂಲ ಎಂದು ಪರಿಗಣಿಸುವುದು ಸರಿಯಲ್ಲ. ಅದು ಒಂದು ಬಗೆಯ ಅತ್ಯಂತ ಪ್ರಗತಿಹೀನ ತೆರಿಗೆ ಪದ್ಧತಿಯಾಗಿದೆ, ಹೆಚ್ಚು ಬಡತನದಲ್ಲಿರುವವರ ಮೇಲೆ ಅದರ ಹೊರೆ ಹೆಚ್ಚಾಗಿರುತ್ತದೆ ಮತ್ತು ಅಸಮಾನತೆಯ ಶಕ್ತಿಯಾಗಿ ಅದು ಕಾರ್ಯನಿರ್ವಹಿಸುತ್ತದೆ" (ಪು.೨೦೨). ಮಕ್ಕಳ/ಪೋಷಕರ ಆರ್ಥಿಕ ಸ್ಥಾನಮಾನದ ಮೇಲಿನ "ಪ್ರಗತಿಪರ" ಅಥವಾ ತಾರತಮ್ಯ ನೀತಿಯ ಶುಲ್ಕ ವ್ಯವಸ್ಥೆಯನ್ನೂ ಅದು ತಿರಸ್ಕರಿಸುತ್ತದೆ ಏಕೆಂದರೆ ಅದು "ಆಡಳಿತಯೋಗ್ಯವಾದುದಲ್ಲ ಮತ್ತು ...ಅವುಗಳಿಂದ ಸಿಗುವ ಫಲ ಅತ್ಯಂತ ನಗಣ್ಯವಾದುದು" (ಪು೨೦೨).

ಸಾಂವಿಧಾನಾತ್ಮಕ ಅವಕಾಶಗಳನ್ನು ಗಮನದಲ್ಲಿರಿಸಿಕೊಂಡು ಆಯೋಗವು ಸಮಾನ ಶಾಲಾ ಪದ್ಧತಿಯ ಮುಕ್ತ ಹಾಗೂ ಕಡ್ಡಾಯ ಶಿಕ್ಷಣವನ್ನು ಕೊಡುವುದರ ಮಹತ್ತ್ವವನ್ನು ಪುನರುಚ್ಚರಿಸುತ್ತದೆ. ಶುಲ್ಕವನ್ನು ವಿಧಿಸುವ ಪರವಾಗಿ ಆಯೋಗದ ಎದುರು ಹಲವಾರು ವಾದಗಳು ಇದ್ದವಾದರೂ ಪ್ರಾಥಮಿಕ ಹಂತದಲ್ಲಿ ಯಾವುದೇ ಶುಲ್ಕವನ್ನು ವಿಧಿಸುವಂತಿಲ್ಲ ಎನ್ನುವ ನಿಲುವನ್ನು ಅದು ತಾಳುತ್ತದೆ. ಎಷ್ಟೇ ಆದರೂ ಇದೊಂದು ಸಾಂವಿಧಾನಾತ್ಮಕ ಬದ್ಧತೆಯಾಗಿತ್ತು. ಮುಕ್ತ ಶಿಕ್ಷಣವೆಂದರೆ ಶುಲ್ಕರಹಿತ ಮುಕ್ತ ಶಿಕ್ಷಣ ಮತ್ತು ಮುಕ್ತ ಪಠ್ಯಪುಸ್ತಕಗಳ ವಿತರಣೆ ಎನ್ನುವುದಕ್ಕಷ್ಟೇ ಆಯೋಗವು ತೃಪ್ತಿಪಟ್ಟುಕೊಳ್ಳಲಿಲ್ಲ, ಅದು ೧)

ಪ್ರಾಥಮಿಕ ಶಾಲೆಯಲ್ಲಿರುವ ಎಲ್ಲ ತರಹದ ಶುಲ್ಕವನ್ನು ರದ್ದುಪಡಿಸುವುದು ಮತ್ತು ೨) ಮುಕ್ತ ಲೇಖನ ಸಾಮಗ್ರಿಗಳ, ಸಮವಸ್ತ್ರಗಳ ಮತ್ತು ಊಟದ ವಿತರಣೆಯಂತಹ ಉತ್ತೇಜನಗಳನ್ನು ನೀಡುವುದನ್ನು ಅದು ಒಳಗೊಂಡಿರಬೇಕು ಎಂದು ಶಿಫಾರಸು ಮಾಡಿದೆ. ಆಗಿದ್ದ ಆರ್ಥಿಕ ಪರಿಸ್ಥಿತಿಯಲ್ಲಿ ಆಯೋಗವು ಅಂತಹ ಶಿಫಾರಸುಗಳನ್ನು ಮಾಡಲು ಸಾಧ್ಯವಿಲ್ಲವೇನೊ ಎನಿಸಿತ್ತು. ಅಂತಹ ಒತ್ತಡಗಳು ಸ್ಪಷ್ಟವಾಗಿದ್ದವು. ಹಾಗಿದ್ದೂ ಹತ್ತನೆಯ ತರಗತಿಯವರೆಗೆ ಮುಕ್ತ ಶಿಕ್ಷಣ ಮತ್ತು ದ್ವಿತೀಯ ಹಾಗೂ ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಅದು ಶಿಫಾರಸು ಮಾಡಿತು. ಎಲ್ಲ ವೃತ್ತಿಪರ ಶಿಕ್ಷಣವೂ ಮುಕ್ತವಾಗಿರಬೇಕು ಎಂದು ಅದು ಶಿಫಾರಸು ಮಾಡಿತು. ಶಿಕ್ಷಣದ ಇತರ ಎಲ್ಲ ಹಂತಗಳಲ್ಲೂ ಕೂಡ ಆಯೋಗವು ಶುಲ್ಕವನ್ನು ವಿಧಿಸುವುದರ ಪರವಾಗಿರಲಿಲ್ಲ; ಆದರೆ ಶುಲ್ಕದ ವಿರುದ್ಧವಾಗಿ ಶಿಫಾರಸ್ಸು ಮಾಡಲಾಗಲಿಲ್ಲ. ದ್ವಿತೀಯ ಹಂತದ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಸ್ತುಸ್ಥಿತಿಯನ್ನು ಮನಗಂಡು ಅದು ಪ್ರೌಢ ಶಿಕ್ಷಣದ ಹಂತದಲ್ಲಿ ಶುಲ್ಕವನ್ನು ವಿಧಿಸಬಹುದೆಂದು ಶಿಫಾರಸು ಮಾಡಿತಾದರೂ "ದ್ವಿತೀಯ ಹಂತದಲ್ಲಿ ಶುಲ್ಕವನ್ನು ವಿಧಿಸುವುದರಿಂದ ಸಮಾಜದ ಬಡವರ್ಗದಿಂದ ಬರುವ ಹಲವಾರು ಮಕ್ಕಳು, ವಿಶೇಷವಾಗಿ ಹೆಣ್ಣು ಮಕ್ಕಳು, ಶಿಕ್ಷಣದಿಂದ ವಂಚಿತರಾಗುತ್ತಾರೆ" ಎನ್ನುವುದು ಆಯೋಗದ ಸ್ಪಷ್ಟವಾದ ಅಭಿಪ್ರಾಯವಾಗಿತ್ತು. ಹಾಗಾಗಿ ದ್ವಿತೀಯ ಹಂತದ ಮತ್ತು ಉನ್ನತ ಶಿಕ್ಷಣದಲ್ಲಿ ಅಗತ್ಯವಿರುವ ಅರ್ಹ ವಿದ್ಯಾರ್ಥಿಗಳೆಲ್ಲರಿಗೂ ಮುಕ್ತ ಶಿಕ್ಷಣವನ್ನು ಕೊಡುವ ಎಲ್ಲ ಪ್ರಯತ್ನವನ್ನು ಮಾಡಬೇಕು ಎಂದು ಪ್ರತಿಪಾದಿಸಿತು.

ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಗ ಹಾಲಿ ಇದ್ದ ಶುಲ್ಕದ ಕೊಡುಗೆಯು (ಒಟ್ಟು ಆದಾಯದ ಅನುಪಾತದಲ್ಲಿ) ಭಾರತದಲ್ಲಿ ಶಿಕ್ಷಣದಲ್ಲಿ ಮುಂದುವರಿದಿರುವ ಮತ್ತು ಶ್ರೀಮಂತ ರಾಷ್ಟ್ರಗಳಾದ ಅಮೆರಿಕ ಹಾಗೂ ಯು.ಕೆ.ಗಿಂತಲೂ ಹೆಚ್ಚಾಗಿದೆ ಎನ್ನುವುದನ್ನು ಆಯೋಗವು ಗುರುತಿಸಿದೆ. ಉನ್ನತ ಶಿಕ್ಷಣದಲ್ಲಿ ಇರಬೇಕಾದ ಶುಲ್ಕದ ಬಗ್ಗೆ ಆಯೋಗದ ಪ್ರಗತಿಪರ ಹಾಗೂ ದೂರದೃಷ್ಟಿಯುಳ್ಳ ನೀತಿಯು ಗಮನಾರ್ಹವಾದುದಾಗಿದೆ, "ಉನ್ನತ ಶಿಕ್ಷಣದಲ್ಲಿ ತತ್‌ಕ್ಷಣವೆ ಶುಲ್ಕವನ್ನು ರದ್ದು ಮಾಡಬೇಕೆಂದು ನಾವು ಪ್ರತಿಪಾದಿಸುವುದಿಲ್ಲ, ಆದರೆ ಇದು ಶಿಕ್ಷಣ ನೀತಿಯ ಅಂತಿಮ ಗುರಿಯಾಗಿರಬೇಕು...ಮುಂದಿನ ಹತ್ತು ವರ್ಷಗಳಲ್ಲಿ, ಪ್ರೌಢ ಶಿಕ್ಷಣ ಹಾಗೂ ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಶುಲ್ಕವನ್ನು ಕುರಿತಂತೆ ಅಗತ್ಯವಿರುವ ಮತ್ತು ಅರ್ಹವಿರುವ ಎಲ್ಲ ವಿದ್ಯಾರ್ಥಿಗಳಿಗೂ ಬೋಧನಾ ಶುಲ್ಕರಹಿತ ಅನುಕೂಲತೆಯನ್ನು ವಿಸ್ತರಿಸುವ ಪ್ರಯತ್ನ ಪ್ರಧಾನವಾಗಿರಬೇಕು. ಪ್ರಾರಂಭದಲ್ಲಿ ಮುಕ್ತ ವಿದ್ಯಾರ್ಥಿವೇತನದ ಅನುಪಾತವನ್ನು ಒಟ್ಟು ದಾಖಲಾತಿಯ ಶೇಕಡಾ ೩೦ರಷ್ಟು ವಿದ್ಯಾರ್ಥಿಗಳಿಗೆ ಹೆಚ್ಚಿಸಬೇಕು. ಸಾಮಾನ್ಯ ಸಮ್ಮತಿಗಾಗಿ ಕೆಲವು ಕ್ಷೇತ್ರಗಳಲ್ಲಿ ಅಳವಡಿಸಲಾಗಿರುವ ಉನ್ನತ ಶಿಕ್ಷಣದಲ್ಲಿ ಮುಕ್ತ-ಬೋಧನೆಯ ಅವಕಾಶವನ್ನು ಅವಕಾಶವಂಚಿತ ಗುಂಪುಗಳಿಗೆ ವಿಸ್ತರಿಸುವುದನ್ನು ನಾವು ಶ್ಲಾಘಿಸುತ್ತೇವೆ" (ಪು. ೨೦೩).

ಇತ್ತೀಚಿನ ದಿನಗಳಲ್ಲಿ ಶುಲ್ಕವನ್ನು ಶಿಕ್ಷಣಕ್ಕೆ ಬೇಕಾದ ಹಣವನ್ನು ಒದಗಿಸುವಲ್ಲಿ ಇರುವ ಅತ್ಯಂತ ಸಾಮಾನ್ಯ ಕ್ರಮ ಎಂದು ಪರಿಗಣಿಸಲಾಗಿದೆ. ವಾಸ್ತವದಲ್ಲಿ ನಿಧಿ ಸಂಗ್ರಹಣೆಯ ಸಂಭಾವ್ಯ ಪ್ರಮುಖ ಮೂಲ ಎಂದೇ ಗುರುತಿಸಲಾಗಿದೆ. ಆದರೆ ಸಮಾಜದ ದುರ್ಬಲವರ್ಗದವರನ್ನು ಕಡಗಣಿಸಲ್ಪಡದೆ ಇರುವಂತೆ ನೋಡಿಕೊಳ್ಳಲು ಶುಲ್ಕವನ್ನು ನಿಗದಿ ಮಾಡಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅದರಿಂದ ವಿನಾಯಿತಿಯನ್ನು ನೀಡುವ ಪ್ರಸ್ತಾವನೆಯನ್ನು ಮಾಡಲಾಗಿದೆ. ಇದು ಅತ್ಯಂತ ಸಾಮಾನ್ಯವಾದುದಾಗಿದೆ.

ಆದರೆಆಯೋಗಕ್ಕೆ ಅಂತಹ ವಾದಗಳಲ್ಲಿ ಹುರುಳಿದ್ದಂತೆ ಕಂಡುಬರಲಿಲ್ಲ. ಆಯೋಗದ ಅಭಿಪ್ರಾಯದಲ್ಲಿ, "ಅಂತಹ ವ್ಯವಸ್ಥೆಯಲ್ಲಿ ಶ್ಲಾಘನೀಯವಾದದ್ದು ಏನೂ ಇಲ್ಲ ಮತ್ತು ಅದರಲ್ಲಿ ಸಾಕಷ್ಟು ಆಡಳಿತಾತ್ಮಕ ಅಡಚಣೆಗಳಿವೆ" (ಪು.೨೦೩).

ಆಯೋಗದ ಅಭಿಪ್ರಾಯದಲ್ಲಿ ವೆಚ್ಚವನ್ನು ಮರುಭರಿಕೆ ಮಾಡಲು ಕ್ರಮ ತೆಗೆದುಕೊಳ್ಳಬೇಕಾದ ಯಾವುದೇ ಅಗತ್ಯವಿಲ್ಲ. ವಾಸ್ತವದಲ್ಲಿ ದೀರ್ಘ ಕಾಲಾವಧಿಯಲ್ಲಿ ಶಿಕ್ಷಣ ವ್ಯವಸ್ಥೆಯು ಸ್ವ-ಧನಸಹಾಯದ್ದಾಗಿರುತ್ತದೆ, ಆದರೆ ಈಗಿನ ಅರ್ಥದಲ್ಲಲ್ಲ. "ದೀರ್ಘ ಕಾಲಾವಧಿಯಲ್ಲಿ ಶಿಕ್ಷಣವು ಸ್ವಲ್ಪಮಟ್ಟಿಗೆ ಸ್ವ-ಧನಸಹಾಯದ್ದಾಗಿರುತ್ತದೆ ಏಕೆಂದರೆ ಈಗಿರುವುದಕ್ಕಿಂತ ಹೆಚ್ಚಿಗೆ ಉತ್ತಮ ವಿದ್ಯಾಭ್ಯಾಸವನ್ನುಳ್ಳ ಶ್ರಮಿಕ ಶಕ್ತಿಯು ಶಿಕ್ಷಣಕ್ಕೆ ಮತ್ತಷ್ಟು ಹೆಚ್ಚು ಹಂಚಿಕೆಯನ್ನು ಮಾಡಲು ಬೇಕಾದ ಸಂಪನ್ಮೂಲಗಳನ್ನು ಒದಗಿಸುತ್ತದೆ... ಆರ್ಥಿಕ ಬೆಳವಣಿಗೆಯ ಮೂಲಕ ಹೆಚ್ಚುವರಿ ಸಂಪನ್ಮೂಲಗಳ ಉತ್ಪತ್ತಿಯಾಗುತ್ತದೆ" (ಪು.೮೮೯). ಇದೇ ತರಹದ ಸಂದರ್ಭದಲ್ಲಿ ಮಿಶಾನ್ (೧೯೬೯) ಕೂಡ ಇದನ್ನೆ ಹೇಳುತ್ತಾನೆ "ಉನ್ನತ ಶಿಕ್ಷಣ ಎನ್ನುವುದು ಒಂದು ತರಹದ ಹೂಡಿಕೆ ಮತ್ತು ಅದು ತನ್ನ ವೆಚ್ಚವನ್ನು ತಾನೇ ಭರಿಸುತ್ತದೆ, ಮತ್ತು ಇದು ಫಲಾನುಭವಿ ವಿದ್ಯಾರ್ಥಿಗಳ ಗಳಿಕೆಯನ್ನು ಹೆಚ್ಚಿಸುತ್ತದೆ ಮತ್ತು ಸರಕಾರವು ಇದರ ಪರಿಣಾಮವಾಗಿ ಬರುವ ತೆರಿಗೆ ಅನುಕೂಲತೆಗಳ ಲಾಭವನ್ನು ಪಡೆಯುತ್ತದೆ". ಆಯೋಗವು ಶಿಕ್ಷಣದ ಆರ್ಥಿಕ ಕೊಡುಗೆಯನ್ನು ಸ್ಪಷ್ಟವಾಗಿ ಗುರುತಿಸುತ್ತದೆ ಅದರ ಅಭಿಪ್ರಾಯದಂತೆ, "ಶಿಕ್ಷಣವು, ಸ್ವಲ್ಪ ಕಾಲಾವಕಾಶವನ್ನು ತೆಗೆದುಕೊಂಡರೂ ಕೂಡ, ರಾಷ್ಟ್ರೀಯ ಉತ್ಪಾದನೆಯ ಹರಿಯುವಿಕೆಯನ್ನು ವೃದ್ಧಿಗೊಳಿಸುತ್ತದೆ ಎನ್ನುವುದು ಅತ್ಯಂತ ಮಹತ್ತ್ವದ್ದಾಗಿದೆ" (ಪು.೮೮೯).

ಶಿಕ್ಷಣದ ಮೇಲೆ ಪೋಷಕರು 'ಅತ್ಯಂತ ದುಬಾರಿ' ವೆಚ್ಚವನ್ನು ಮಾಡುತ್ತಾರೆ ಎನ್ನುವುದನ್ನು ಗಮನಿಸಿದ ಆಯೋಗವು ಶಿಕ್ಷಣದ ಮೇಲಿನ ಮನೆಯ ವೆಚ್ಚವನ್ನು ಕಡಮೆ ಮಾಡಲು ಹೇಗೆಪ್ರಾಥಮಿಕ ಹಂತದಲ್ಲಿ ಉಚಿತವಾಗಿ ಪಠ್ಯಪುಸ್ತಕಗಳನ್ನು ಕೊಡುವುದು, ದ್ವಿತೀಯ ಹಂತದಲ್ಲಿ ಪುಸ್ತಕ ಬ್ಯಾಂಕುಗಳನ್ನು ಪ್ರಾರಂಭಿಸುವುದು ಮತ್ತು ಉನ್ನತ ಶಿಕ್ಷಣದಲ್ಲಿ ಪುಸ್ತಕ ಅನುದಾನ ಮುಂತಾದ ಕೆಲವು ಕ್ರಮಗಳನ್ನು ಕೈಗೊಳ್ಳಬಹುದು ಎನ್ನುವುದನ್ನು ಕುರಿತು ಕೆಲವು ಸೂಚನೆಗಳನ್ನು ನೀಡಿತು.

ಅನಂತರದ ಅವಧಿಯಲ್ಲಿ ಕಂಡುಬಂದ ಶಿಕ್ಷಣದಲ್ಲಿ ಶುಲ್ಕವನ್ನು ಸಂಗ್ರಹಿಸುವಂತಹ ಆಚರಣೆಯು ಆಯೋಗವು ಹೇಳಿದ್ದಕ್ಕೆ ತದ್ವಿರುದ್ಧವಾಗಿತ್ತು. ಪ್ರಾಥಮಿಕ ಹಂತದಲ್ಲಿ ಸರ್ಕಾರಿ, ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರದ ಧನಸಹಾಯದ ಶಾಲೆಗಳಲ್ಲಿ ಇತರ ವಿವಿಧ ಶುಲ್ಕಗಳಲ್ಲದೆ ಬೋಧನಾ ಶುಲ್ಕವನ್ನು ಒಳಗೊಂಡು ಶುಲ್ಕವನ್ನು ಸಂಗ್ರಹಿಸುವುದು ಮುಂದುವರಿಯಿತು (ತಿಲಕ್ ೧೯೯೬ಎ); ದ್ವಿತೀಯ ಹಂತದಲ್ಲಿ ಶುಲ್ಕದ ಮಟ್ಟವು ಹೆಚ್ಚಾಗುತ್ತಾ ಹೋಯಿತು; ಮತ್ತು ಉನ್ನತ ಶಿಕ್ಷಣದಲ್ಲಿ ಶುಲ್ಕದ ಏರಿಕೆಯಾಯಿತು (ತಿಲಕ್ ಮತ್ತು ರಾಣಿ ೨೦೦೩).

ಶಿಕ್ಷಣದಲ್ಲಿ ಖಾಸಗಿ ವಲಯದ ಮೇಲಿನ ವಿಪರೀತ ಅವಲಂಬನೆಯ ಬಗ್ಗೆ ಕೂಡ ಆಯೋಗವು ಎಚ್ಚರಿಸಿತು (ನಾಯಕ್ ೧೯೭೮:೩೦). ಶಿಕ್ಷಣ ವ್ಯವಸ್ಥೆಯಲ್ಲಿ ಖಾಸಗಿ ವಲಯದ ಪಾತ್ರವು ಮಿತಿಯಿಂದ ಕೂಡಿರುತ್ತದೆ ಎಂದು ಆಯೋಗವು ಭಾವಿಸುತ್ತದೆ. ಶಿಕ್ಷಣದಲ್ಲಿ ಖಾಸಗಿ ಉದ್ಯಮವನ್ನು ನಿಯಂತ್ರಿಸಬೇಕು ಎಂದು ಅದು ಪ್ರತಿಪಾದಿಸುತ್ತದೆ. ಪುನಃ ಆಯೋಗದ ಈ

ಸಲಹೆಯನ್ನು ಸರಕಾರವು ಗಣನೆಗೆ ತೆಗೆದುಕೊಳ್ಳಲಿಲ್ಲ, ಇದನ್ನು ಬಲವಾಗಿ ವಿರೋಧಿಸಲಾಯಿತು. ಶಿಕ್ಷಣದ ಎಲ್ಲ ಹಂತಗಳಲ್ಲೂ ಖಾಸಗಿ ವಲಯಕ್ಕೆ ಮುಕ್ತ ಅವಕಾಶವನ್ನು, ಅದರ ಎಲ್ಲ ಪರಿಣಾಮಗಳೊಂದಿಗೆ, ನೀಡಲಾಯಿತು.

ಇತರ ನಿಯಮಗಳು ಮತ್ತು ಶಿಫಾರಸುಗಳು

ಆಯೋಗವು ಅಳವಡಿಸಿಕೊಂಡ ತೀವ್ರವಾದ ಹಣಕಾಸಿನ ಇಂಗಿತವುಳ್ಳ ಕೆಲವು ನಿಯಮಗಳನ್ನು ಈ ಕೆಳಗಿನಂತೆ ಗುರುತಿಸಬಹುದು:

ಮೊದಲನೆಯದಾಗಿ, ವಿದ್ಯಾರ್ಥಿ-ಶಿಕ್ಷಕ ಅನುಪಾತ. ಕಾರ್ಯಸಾಧುವಾದ ಕಾರಣಗಳಿಗೋಸ್ಕರ ಸಂಪನ್ಮೂಲಗಳನ್ನು ಅಂದಾಜು ಮಾಡುವಲ್ಲಿ ಹೆಚ್ಚಿನ ಮಟ್ಟದ ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ಅಳವಡಿಸಿಕೊಂಡಿತಾದರೂ ಒಂದು ಒಳ್ಳೆಯ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಪ್ರಾಥಮಿಕ ಹಂತದಲ್ಲಿ ಅನುಪಾತವು ೩೦ರಿಂದ ೩೫ರವರೆಗೆ ಇರಬೇಕು ಎಂದು ಬಯಸಿತು. ದ್ವಿತೀಯ ಕೆಳಹಂತದ ಶಿಕ್ಷಣದಲ್ಲಿ ಪ್ರತಿಯೊಬ್ಬ ಶಿಕ್ಷಕರಿಗೆ ೨೫ ಮತ್ತು ದ್ವಿತೀಯ ಪ್ರೌಢ ಹಂತದಲ್ಲಿ ೨೦ರಷ್ಟಿರಬೇಕು. ದ್ವಿತೀಯ ಹಂತದ/ವೃತ್ತಿಪರ ಶಿಕ್ಷಣದಲ್ಲಿ ಪ್ರತಿಶಿಕ್ಷಕರಿಗೆ ೧೧ ವಿದ್ಯಾರ್ಥಿಗಳು ಸೂಕ್ತ ಎಂದು ಹೇಳುತ್ತದೆ. ಅಂತಹ ನಿಯಮಗಳನ್ನು ಉನ್ನತ ಶಿಕ್ಷಣಕ್ಕೂ ಕೂಡ ಆಯೋಗವು ಸೂಚಿಸುತ್ತದೆ. ಅಲ್ಲಿ ಸ್ನಾತಕ ಪದವಿಗಳಲ್ಲಿ ಪ್ರತಿ ಶಿಕ್ಷಕರಿಗೆ ೧೫ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಅದು ಎಂಟು ವಿದ್ಯಾರ್ಥಿಗಳ ಮಟ್ಟದಲ್ಲಿರಬೇಕು ಎಂದು ಸೂಚಿಸುತ್ತದೆ. ಇಂತಹ ಬಹಳಷ್ಟು ನಿಯಮಗಳು ಸಮಕಾಲೀನ ಶಿಕ್ಷಣ ವ್ಯವಸ್ಥೆಗೂ ಸಂಗತವಾಗಿವೆ. ಈಗಿರುವ ನಿಯಮ ಮತ್ತು ವಾಸ್ತವದಲ್ಲಿರುವ ವಿದ್ಯಾರ್ಥಿ-ಶಿಕ್ಷಕ ಅನುಪಾತವು ಆಯೋಗವು ಸೂಚಿಸಿದ್ದಕ್ಕಿಂತ ಹೆಚ್ಚಾಗಿದೆ.

ಎರಡನೆಯದಾಗಿ, ಆಯೋಗವು ವೃತ್ತಿಪರ ಶಿಕ್ಷಣದ ಮಹತ್ತ್ವವನ್ನು ಹಾಗೆಯೆ ಉನ್ನತ ಶಿಕ್ಷಣದ ಮೇಲಿನ ಒತ್ತಡವನ್ನು ಗುರುತಿಸುತ್ತದೆ. ಅದು ಹೆಚ್ಚಿನ ಪ್ರಮಾಣದ ವೃತ್ತಿಪರ ಶಿಕ್ಷಣವನ್ನು ಪ್ರಾರಂಭಿಸಲು ಶಿಫಾರಸು ಮಾಡುತ್ತದೆ; ದ್ವಿತೀಯ ಹಂತದಲ್ಲಿ ಒಟ್ಟು ದಾಖಲಾತಿಯ ಶೇಕಡ ೨೦ರಷ್ಟು ಮತ್ತು ಶೇಕಡ ೫೦ರಷ್ಟು ದ್ವಿತೀಯ ಪ್ರೌಢ ಶಿಕ್ಷಣ ಹಂತದಲ್ಲಿ ಮತ್ತು ಶೇಕಡ ೩೦ರಷ್ಟು ಉನ್ನತ ಶಿಕ್ಷಣದಲ್ಲಿ ವೃತ್ತಿಪರ ಶಿಕ್ಷಣವನ್ನು ಪ್ರಾರಂಭಿಸಬೇಕು ಎಂದು ಶಿಫಾರಸು ಮಾಡುತ್ತದೆ. ಇಷ್ಟಲ್ಲದೆ ಉನ್ನತ ಶಿಕ್ಷಣದ ಶೇಕಡ ೬೦ರಷ್ಟು ವಿದ್ಯಾರ್ಥಿಗಳು ವೃತ್ತಿಪರ ಹಾಗೂ ವಿಜ್ಞಾನ ಕೋರ್ಸುಗಳಲ್ಲಿರಬೇಕು ಎಂದು ಅದು ಪ್ರತಿಪಾದಿಸುತ್ತದೆ.

ಅನಂತರದ ವರ್ಷಗಳಲ್ಲಿ ಸರ್ಕಾರವು ದ್ವಿತೀಯ ಹಂತದ ಶಿಕ್ಷಣದಲ್ಲಿ ವೃತ್ತಿಪರ ಕೋರ್ಸುಗಳನ್ನು ಪ್ರಾರಂಭಿಸಲು ಬಯಸಿತಾದರೂ ಅದರ ಪ್ರಗತಿ ಅಷ್ಟೇನು ತೃಪ್ತಿದಾಯಕವಾಗಿಲ್ಲ. ವೃತ್ತಿಪರ ಶಿಕ್ಷಣ ಎನ್ನುವುದು ಎರಡನೆಯ ದರ್ಜೆಯ ಮತ್ತು ಬಡವರಿಗಾಗಿ ವಿನ್ಯಾಸಗೊಳಿಸಲಾದ ಅಗ್ಗದ ಶಿಕ್ಷಣ ಎನ್ನುವ ಅವಗಣನೆ ಅದಕ್ಕೆ ಮುಖ್ಯ ಕಾರಣವಾಗಿತ್ತು. ಹಾಗಾಗಿ ಅದು ಬೇಡಿಕೆ ಮತ್ತು ಪೂರೈಕೆ ಎರಡೂ ಕಡೆಯಿಂದಲೂ ಸಂಕಷ್ಟವನ್ನು ಎದುರಿಸಿತು. ಇತ್ತೀಚಿನ ವರ್ಷಗಳಲ್ಲಿ ಕಾಲೇಜಿನಲ್ಲಿ ವೃತ್ತಿಪರ ಶಿಕ್ಷಣವನ್ನು ಪ್ರಾರಂಭಿಸಲಾಗಿದೆ. ಒಟ್ಟಾರೆಯಾಗಿ ಯಾವುದೇ ಗಂಭೀರ ಪ್ರಯತ್ನಗಳು ನಡೆಯದೆ

ಇರುವುದರಿಂದ ಆಯೋಗವು ವಿಧಿಸಿದ ಗುರಿಯನ್ನು ನಲವತ್ತು ವರ್ಷಗಳಾದರೂ ಇನ್ನೂ ಸಾಧಿಸಲಾಗಿಲ್ಲ.

ಮೂರನೆಯದಾಗಿ, ಶಿಕ್ಷಣದ ಎಲ್ಲ ಹಂತಗಳಲ್ಲೂ ತಜ್ಞತೆಯನ್ನು ಉತ್ತೇಜಿಸುವುದು ಆಯೋಗದ ಬಯಕೆಯಾಗಿತ್ತು. ಎಲ್ಲ ಹಂತಗಳಲ್ಲೂ ಶೇಕಡಾ ಹತ್ತರಷ್ಟು ಶಾಲೆಗಳು ಉತ್ತಮವಾದ ಗುಣಮಟ್ಟವನ್ನು ಬೆಳೆಸಿಕೊಂಡು ಇತರ ಶಾಲೆಗಳಿಗೆ "ಮೈಲುಗಲ್ಲು" ಸಂಸ್ಥೆಗಳಾಗಿ ಬೆಳೆಯುವ ಹಾಗೆ ಮಾಡಲು ಅವುಗಳಿಗೆ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸಬೇಕು. ಆಯೋಗವು ಇದನ್ನು "ಅತ್ಯಂತ ಆದ್ಯತೆಯ ಮೇಲೆ ಮಾಡಬೇಕಾದ ಕಾರ್ಯಕ್ರಮ" ಎಂದು ಶಿಫಾರಸು ಮಾಡುತ್ತದೆ (ಪು.೪೬೩). ಅದೇ ರೀತಿಯಲ್ಲಿ ಆಯೋಗವು "ಪ್ರಥಮ ಶ್ರೇಣಿಯ ಸ್ನಾತಕೋತ್ತರ ಹಾಗೂ ಸಂಶೋಧನೆಯು ಸಾಧ್ಯವಾಗುವ ಹಾಗೆ" ಐದು ಅಥವಾ ಆರು ಪ್ರಮುಖ ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಬಯಸುತ್ತದೆ (ಪು. ೫೦೬-೦೭). ವಿಶ್ವವಿದ್ಯಾಲಯ ಶಿಕ್ಷಣದಲ್ಲಿ ಇದು ಒಂದು ರೀತಿಯಲ್ಲಿ 'ಗಣ್ಯವಾದಿ' ಚಿಂತನೆಯಂತೆ ಕಂಡುಬಂದುದರಿಂದ ಅಲ್ಲಿ ಅದನ್ನು ಅಳವಡಿಸಲಿಲ್ಲ, ಆದರೆ ಶಾಲಾ ಮಟ್ಟದಲ್ಲಿ ಮುಂದಿನ ದಶಕಗಳಲ್ಲಿ ಶಿಫಾರಸನ್ನು ಅನುಸರಿಸಲಾಯಿತು. ನವೋದಯ ವಿದ್ಯಾಲಯಗಳ ಯೋಜನೆಯನ್ನು ರಾಷ್ಟ್ರೀಯ ಶಿಕ್ಷಣ ಯೋಜನೆ ೧೯೮೬ ಶಿಫಾರಸ್ಸು ಮಾಡಿದ್ದನ್ನು ಅನಂತರ ಸ್ಥಾಪಿಸಲಾಯಿತು. ಇದು ಆಯೋಗವು ಮಾಡಿದ ಶಿಫಾರಸ್ಸಿಗೆ ಹತ್ತಿರ ಬರುತ್ತದೆ. ಶೇಕಡ ಹತ್ತರಷ್ಟು ಸಂಸ್ಥೆಗಳನ್ನು ಮಾತ್ರ ಕೇಂದ್ರೀಕರಿಸಿ ಮಾಡುವ ಪ್ರಯತ್ನ ಹಾಗೂ ಸಂಪನ್ಮೂಲಗಳನ್ನು ಒದಗಿಸುವುದರ ಬದಲಾಗಿ "ಎಲ್ಲ ಸಂಸ್ಥೆಗಳೂ ಸಹ ಕನಿಷ್ಠ ಮಟ್ಟದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವಂತೆ ಮಾಡಿ ಸೂಕ್ತವಾದ ಮಾನದಂಡವನ್ನು ಆಧರಿಸಿ ಉನ್ನತ ಸಾಧನೆಯನ್ನು ಮಾಡಿದ ಮತ್ತು ಅಂತಹ ಭರವಸೆಯನ್ನು ಹುಟ್ಟಿಸುವ ಸಂಸ್ಥೆಗಳನ್ನು ಗುರುತಿಸಿ ಅವುಗಳಿಗೆ ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸುವುದರಿಂದ ಹೆಚ್ಚು ಉತ್ತಮ ಫಲಿತಾಂಶ ಬರುತ್ತದೆ" ಎನ್ನುವ ನೆಲೆಯಲ್ಲಿ ವಿಶ್ವವಿದ್ಯಾಲಯಗಳ ಪ್ರಸ್ತಾವನೆಗೆ ಪುರಸ್ಕಾರ ಸಿಗಲಿಲ್ಲ. ಆಯೋಗವು ಪ್ರಸ್ತಾವಿಸಿದ ರೀತಿಯಲ್ಲೇ ಅಲ್ಲದಿದ್ದರೂ ಕೆಲವು ವಿಶ್ವವಿದ್ಯಾಲಯಗಳು ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಅವುಗಳ ಶೇಷ್ಠತೆಗಾಗಿ ಹಾಗೂ ಅವುಗಳ ಶ್ರೇಷ್ಠತೆಯ ಕೇಂದ್ರಗಳಿಗೆ ಬೆಂಬಲವನ್ನು ಪಡೆದವು, ಅಲ್ಲದೆ ಅಂತರ್-ವಿಶ್ವವಿದ್ಯಾಲಯ ಕೇಂದ್ರಗಳನ್ನು ಸ್ಥಾಪಿಸಲಾಯಿತು ಮತ್ತು ಪ್ರಥಮ ದರ್ಜೆಯ ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನೆಯನ್ನು ಪ್ರಾರಂಭಿಸಿದ ಅವುಗಳಿಗೆ ಹೆಚ್ಚುವರಿ ಧನಸಹಾಯದ ನೆರವು ನೀಡಲಾಯಿತು. ಇದೆಲ್ಲವೂ ಒಂದು ರೀತಿಯಲ್ಲಿ ಆಯೋಗವು ಹೊಂದಿದ ಉದ್ದೇಶಗಳಿಗೆ ಪೂರಕವಾಗಿಯೇ ಇದ್ದವು.

ಈ ಮೇಲೆ ಹೇಳಿದ್ದಲ್ಲದೆ ಆಯೋಗವು ತನ್ನ ವರದಿಯಲ್ಲಿ ಮಾಡಿರುವ ಕೆಲವು ಬೋಧಪ್ರದ ಅವಲೋಕನಗಳು ಇಂದಿನ ಸಂದರ್ಭದಲ್ಲಿ ಅತ್ಯಂತ ಮಹತ್ತ್ವದ್ದಾಗಿವೆ. ಶಿಕ್ಷಣಕ್ಕೆ ಧನಸಹಾಯವನ್ನು ಕುರಿತು ಮಾಡಿರುವ ಮೂರು ಅಂತಹ ಅವಲೋಕನಗಳನ್ನು ಇಲ್ಲಿ ಉಲ್ಲೇಖಿಸಬಹುದು:

"ಶಿಕ್ಷಣದ ಬೆಳವಣಿಗೆಯ ಪ್ರಾರಂಭಿಕ ಹಂತದಲ್ಲಿ ಆಯೋಗವು ಶಿಕ್ಷಣದ ವೆಚ್ಚದ ಪ್ರಮಾಣವು ಹೆಚ್ಚು ಕಡಮೆ ಆದಾಯದ ಪ್ರಮಾಣಕ್ಕಿಂತ ಎರಡು ಪಟ್ಟು ಹೆಚ್ಚಿರಬೇಕು" ಎಂದು ಆಯೋಗವು ಸರಿಯಾಗಿಯೆ ಗುರುತಿಸಿದೆ (ಪು. ೮೭೩). ಇದು ಅಗತ್ಯವಾಗಿ

ಮಾಡಬೇಕಾದದ್ದು ಎನ್ನುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಉದಾಹರಣೆಗೆ ಶುಲ್ಟ್ಜ಼ (೧೯೬೬ ಪು.೫) ಅವರು ಹೇಳುವ ಹಾಗೆ, "ಆರ್ಥಿಕ ಆಧುನಿಕೀಕರಣದ ಪ್ರಕ್ರಿಯೆಯಲ್ಲಿ ಮಾನವ ಬಂಡವಾಳದ ಬೆಳವಣಿಗೆಯ ಪ್ರಮಾಣವು ಪುನರುತ್ಪಾದಿಸಬಹುದಾದ ಭೌತಿಕ ಬಂಡವಾಳಕ್ಕಿಂತ ಹೆಚ್ಚಿರುತ್ತದೆ". ಶಿಕ್ಷಣದ ವೆಚ್ಚವು ಆರ್ಥಿಕತೆಯ ಬೆಳವಣಿಗೆಯ ಎರಡು ಪಟ್ಟು ಹೆಚ್ಚಿರುತ್ತದೆ ಎನ್ನುವ ಆದೇಶವನ್ನು ನಾವು ಪಾಲಿಸಿದರೆ ದೇಶದ ಒಟ್ಟು ಉತ್ಪಾದನೆಯ ಶೇಕಡ ೬ರಷ್ಟನ್ನು ಶಿಕ್ಷಣಕ್ಕೆ ಹಂಚಿಕೆ ಮಾಡಬೇಕಾದ ಗುರಿಯನ್ನು ತಲಪಲು ಕಷ್ಟವಾಗುವುದೇ ಇಲ್ಲ; ಭಾರತ ಸರಕಾರದ ಒಂದು ಸಮಿತಿಯು (೨೦೦೫) ತೋರಿಸಿರುವ ಹಾಗೆ ಅದನ್ನು ಬಹಳ ಬೇಗ ಮುಟ್ಟಬಹುದು.

ಸ್ಥಿರ ಬೆಲೆಗೆ ಅಂಕಿಸಂಖ್ಯೆಗಳನ್ನು ಪರಿವರ್ತಿಸುವ ಮೂಲಕ ಆಯೋಗವು ಶಿಕ್ಷಣದ ಮೇಲಿನ ವೆಚ್ಚದ ವಿಶ್ಲೇಷಣೆಯನ್ನು ಮಾಡಬೇಕೆಂದು ಶಿಫಾರಸು ಮಾಡುತ್ತದೆ. ಸರ್ಕಾರದ ಅಧಿಕೃತ ದಾಖಲೆಗಳಲ್ಲಿ ಶಿಕ್ಷಣದ ವೆಚ್ಚವನ್ನು ಸ್ಥಿರ ಬೆಲೆಯ ಸೂಚ್ಯಂಕದಲ್ಲಿ ತೋರಿಸದಿರುವುದರಿಂದ ಸಂಶೋಧಕರು ಶಿಕ್ಷಣದ ವೆಚ್ಚವನ್ನು ರಾಷ್ಟ್ರೀಯ ಆದಾಯ ಡಿಫ್ಲೇಟರ್ಸ್ ಅಥವಾ ಬೆಲೆ ಸೂಚ್ಯಂಕಗಳನ್ನು ಬಳಸಿ ವಾಸ್ತವ ಬೆಲೆಗಳಲ್ಲಿ ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಪ್ರಾರಂಭಿಸಿದ್ದಾರೆ.

ಸಂಪನ್ಮೂಲಗಳ ದಕ್ಷ ಬಳಕೆಯ ಅಗತ್ಯವನ್ನು ಆಯೋಗವು ಒತ್ತಿ ಹೇಳುತ್ತದೆ. ಶಿಕ್ಷಣದಲ್ಲಿ ಸಂಪನ್ಮೂಲಗಳನ್ನು ಸರಿಯಾಗಿ ಬಳಸದಿರುವ ಮತ್ತು ಅವುಗಳನ್ನು ಪೋಲು ಮಾಡುವುದನ್ನು ತಡೆದು ಅದನ್ನು ಇತಿಮಿತಿಯಲ್ಲಿ ಬಳಸಲು ಕ್ರಮವನ್ನು ಕೈಗೊಳ್ಳಬೇಕೆಂದು ಆಯೋಗವು ಆಗ್ರಹಿಸುತ್ತದೆ.

ಸಾರಾಂಶ ಅವಲೋಕನಗಳು

ಈ ವರದಿಯನ್ನು ಭಾರತದ ಶಿಕ್ಷಣದ ಇತಿಹಾಸದಲ್ಲಿನ ಒಂದು ಮೈಲಿಗಲ್ಲು ಎಂದು ಪರಿಗಣಿಸಲಾಗಿದೆ. ಆಯೋಗವು ಹಲವಾರು ಪ್ರಮುಖ ಸಲಹೆಗಳನ್ನು ನೀಡಿದೆ, ಅವು ೪೦ ವರ್ಷಗಳ ಅನಂತರ ಈಗಲೂ ಶಿಕ್ಷಣದ ಅಭಿವೃದ್ಧಿಗೆ ಸಂಗತವಾಗಿವೆ. ಅವು ಸಂಗತವಾಗಿರುವುದು ಅವುಗಳನ್ನು ಇನ್ನೂ ಅನುಷ್ಠಾನಗೊಳಿಸಿಲ್ಲ ಎನ್ನುವ ಕಾರಣಕ್ಕಲ್ಲ, ಅವು ಸಂಗತವಾಗಿರುವುದು ಅವುಗಳ ಅಂತರ್ಗತ ಮೌಲ್ಯಗಳಿಗಾಗಿ, ಮುಖ್ಯವಾಗಿ ಆಯೋಗವು ದೀರ್ಘಕಾಲದ ದೃಷ್ಟಿಯಿಂದ ನೋಡಿದೆ, ದ್ರಷ್ಟಾರನ ದೃಷ್ಟಿಕೋನವನ್ನು ಅದು ಅಳವಡಿಸಿಕೊಂಡಿದೆ ಪ್ರಾಯೋಗಿಕ ಪುರಾವೆಗಳು ಮತ್ತು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಜ್ಞಾನದ ನೆಲೆಯ ಮೇಲೆ ಅದರ ಶಿಫಾರಸುಗಳು ನಿಂತಿವೆ. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರದ ಬಗೆಗಿನ ನಂಬಿಕೆ ಬಲವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇದರ ಸಲಹೆಗಳು ರಾಷ್ಟ್ರೀಯ ಅಭಿವೃದ್ಧಿಯನ್ನು ಕುರಿತು ಬಲವಾದ ಬದ್ಧತೆಯ ನೆಲೆಯನ್ನು ಹೊಂದಿವೆ.

ಒಟ್ಟಾರೆಯಾಗಿ ಕಠಿಣ ಸನ್ನಿವೇಶದಲ್ಲಿ ಕಾರ್ಯನಿರ್ವಹಿಸಬೇಕಾದ್ದರಿಂದ ಹಲವಾರು ಕಾರಣಗಳಿಂದ ಅತ್ಯಂತ ಕಟ್ಟುನಿಟ್ಟಾಗಿರುವ ಅಗತ್ಯವನ್ನು ಮನಗಂಡಿದ್ದರೂ ಕೂಡ ಆಯೋಗವು ಕೆಲವು ಪ್ರಮುಖವಾದ ಸಂಗತಿಗಳ ಕುರಿತು ಯಾವುದೇ ರಾಜಿಯನ್ನು ಮಾಡಿಕೊಳ್ಳಲಿಲ್ಲ. ಉದಾಹರಣೆಗೆ ರಾಷ್ಟ್ರೀಯ ಶಿಕ್ಷಣ ಪದ್ಧತಿಯೊಂದನ್ನು ಅದು ಬಲವಾಗಿ

ಪ್ರತಿಪಾದಿಸಿತು; ಮತ್ತು ಎಲ್ಲ ಸಾಮಾನ್ಯ ಶಾಲಾ ಮಾದರಿಯ ಮಕ್ಕಳಿಗೂ ಪೂರ್ಣಾವಧಿ ಸಾರ್ವತ್ರಿಕ ಶಿಕ್ಷಣಕ್ಕಾಗಿ ಆಗ್ರಹಿಸಿತು. ಪೂರ್ಣಾವಧಿ ಸಾರ್ವತ್ರಿಕ ಶಿಕ್ಷಣವು ತತ್ ಕ್ಷಣದಲ್ಲೇ ಸಾಧ್ಯವಿಲ್ಲದಿದ್ದ ಕಾರಣ ಪರ್ಯಾಯ ಶಿಕ್ಷಣ ಮಾರ್ಗದ ಅಭಿವೃದ್ಧಿಯನ್ನು ಅದು ಸೂಚಿಸಿತು. ಹತ್ತನೆಯ ತರಗತಿಯವರೆಗೆ ಮುಕ್ತ ಸಮಾನ ಸಾರ್ವತ್ರಿಕ ಶಿಕ್ಷಣದ ಶಾಲಾ ಪದ್ಧತಿಯನ್ನು ಮತ್ತು ಪ್ರಾಥಮಿಕ ಹಂತದಲ್ಲಿ ನೆರೆಹೊರೆಯ ಶಾಲಾ ಪರಿಕಲ್ಪನೆಯನ್ನು ಅದು ಪ್ರತಿಪಾದಿಸಿತು (ಪು.೪೫೮). ಎಲ್ಲ ಖಾಸಗಿ ಶಾಲೆಗಳನ್ನು ಸಮಾನ ಶಾಲಾ ವ್ಯವಸ್ಥೆಯಡಿಯಲ್ಲಿ ತರಬೇಕೆಂದು ಅದು ಸೂಚಿಸಿತು. ಮೂರನೆಯದಾಗಿ, ಅದು ವಿದ್ಯಾರ್ಥಿ ವೇತನದ ಕಾರ್ಯಕ್ರಮವನ್ನು ವ್ಯಾಪಕವಾಗಿ ವಿಸ್ತರಿಸಬೇಕು ಎಂದು ಶಿಫಾರಸು ಮಾಡಿತು. ಶಿಕ್ಷಣದಲ್ಲಿ ಕೇಂದ್ರ ವಲಯವು ಪ್ರಾಯೋಜಿಸಿದ ದೊಡ್ಡ ಮಟ್ಟದಲ್ಲಿ ವಿಸ್ತರಿಸಬೇಕು ಎಂದು ಶಿಫಾರಸು ಮಾಡಿತು. ಎಲ್ಲಕ್ಕಿಂತ ಹೆಚ್ಚಾಗಿ ಶಿಕ್ಷಣಕ್ಕೆ ಸಂಪನ್ಮೂಲಗಳನ್ನು ರಾಷ್ಟ್ರೀಯ ಉತ್ಪಾದನೆಯ ಶೇಕಡ ೬ರಷ್ಟಕ್ಕೆ ಹೆಚ್ಚಿಸಬೇಕೆಂದು ಅದು ಬಲವಾಗಿ ಪ್ರತಿಪಾದಿಸಿದೆ.

ದುರದೃಷ್ಟಕರ ಸಂಗತಿ ಎಂದರೆ ಆಯೋಗವು ಸುಧಾರಣೆಗಳನ್ನು ಒಂದು ಸಮಗ್ರ ರೂಪದಲ್ಲಿ ಶಿಫಾರಸ್ಸು ಮಾಡಿದರೆ ಸರಕಾರವು ಅದನ್ನು ಬಿಡಿಬಿಡಿಯಾದ ಸಲಹೆಗಳಂತೆ ನೋಡಿತು. ನಾಯಕ್ (೧೯೭೯) ಅವರುಗಮನಿಸಿದಂತೆ "ಶಿಕ್ಷಣವನ್ನು ಸಮಗ್ರವಾಗಿ ನೋಡುವಂತೆ ನಿರ್ದೇಶನವನ್ನು ಹೊಂದಿದ ಒಂದು ಆಯೋಗದ ಶಿಫಾರಸನ್ನು ಬಿಡಿಬಿಡಿಯಾಗಿ ಪರಿಗಣಿಸಿದ ಕ್ರಮವು ಒಂದು ದುರಂತವಾಗಿದೆ" (ಪು. ೬೮; ಒತ್ತು ಮೂಲದಲ್ಲಿದೆ). ಸರಕಾರದ ನಿಷ್ಕ್ರಿಯತೆಗೆ ಹಲವಾರು ಕಾರಣಗಳಿರಬಹುದಾದರೂ, ರಾಜಕೀಯ ಇಚ್ಛಾಶಕ್ತಿ ಇಲ್ಲದಿರುವುದು ಅವುಗಳಲ್ಲಿ ಅತ್ಯಂತ ಪ್ರಮುಖವಾದುದಾಗಿದೆ. ಅದರ ಪರಿಣಾಮವಾಗಿ ಭಾರತೀಯ ಶಿಕ್ಷಣದಲ್ಲಿ, ಅನಕ್ಷರತೆಯನ್ನು ಹೋಗಲಾಡಿಸುವಲ್ಲಿ, ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವಲ್ಲಿ, ದ್ವಿತೀಯ ಹಂತದ ಶಿಕ್ಷಣವನ್ನು ವೃತ್ತಿಪರಗೊಳಿಸುವಲ್ಲಿ, ಉನ್ನತ ಶಿಕ್ಷಣದಲ್ಲಿ ಉತ್ತಮಗುಣಮಟ್ಟ ಮತ್ತು ತಜ್ಞತೆಯನ್ನು ಖಾತ್ರಿಗೊಳಿಸುವಲ್ಲಿ, ಶಿಕ್ಷಣಕ್ಕೆ ಅಗತ್ಯವಾದಷ್ಟು ಸಂಪನ್ಮೂಲಗಳ ಹಂಚಿಕೆಯಲ್ಲಿ, ವ್ಯವಸ್ಥೆಯ ಹಣಕಾಸಿನ ದಕ್ಷತೆಯನ್ನು ಉತ್ತಮಪಡಿಸುವಲ್ಲಿ ಎದ್ದು ಕಾಣುವಂತಹ ವಿಫಲತೆಗಳಿವೆ. ಇವೆಲ್ಲ ವಿಫಲತೆಗಳೊಟ್ಟಿಗೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಅಸಾಧಾರಣವಾದ ಹೆಚ್ಚಳ, ಜಗತ್ತಿನಲ್ಲಿ ಅತ್ಯಂತ ವೈಜ್ಞಾನಿಕ ಹಾಗೂ ತಾಂತ್ರಿಕ ಮಾನವಶಕ್ತಿಯ ಬೃಹತ್ ಸಮೂಹವನ್ನು ಅಭಿವೃದ್ಧಿಪಡಿಸುವ ಮತ್ತು ಮಾನವಶಕ್ತಿಯನ್ನು ರಫ್ತು ಮಾಡುವ ನಿಟ್ಟಿನಲ್ಲೂ ವಿಫಲತೆಗಳಿವೆ. ಶಿಕ್ಷಣ ವಲಯದ ಬಗ್ಗೆ ವ್ಯಾಪಕವಾದ ಅತೃಪ್ತಿಗಳಿಗಿರುವ ಕಾರಣಗಳು ಸ್ಪಷ್ಟವಾಗಿವೆ. "ವರದಿಯನ್ನು ಕಪಾಟಿನಲ್ಲಿ ಹಾಗೆಯೆ ಇಟ್ಟ ಅಥವಾ ಅದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದಿರುವ ಪರಿಸ್ಥಿತಿಯು ವರದಿಯೇ ಇಲ್ಲದಿರುವ ಪರಿಸ್ಥಿತಿಗಿಂತ ಕೆಟ್ಟದ್ದು ಏಕೆಂದರೆ ಭರವಸೆಯನ್ನು ಹುಟ್ಟಿಸಿ ಅದನ್ನು ಪೂರೈಸದೆ ಒಂದು ಬಗೆಯ ಹತಾಶೆಯನ್ನು ಇದು ಸೃಷ್ಟಿಸುತ್ತದೆ" ಎಂದು ಆಯೋಗವೆ ಸ್ವತಃ ಎಚ್ಚರಿಸಿದೆ.